

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 07 | Tuesday 09-09-2025 | E-mail : maruti.b.hosamani76@gmail.com | Page: 4 | Price : Rs. 1/-

# ‘ಗ್ಯಾಂಗ್ಸ್ ಆಫ್ ಯುಕೆ’ ಚಿತ್ರದ ಟೀಸರ್: ಬಿಡುಗಡೆ ಮಾಡಿದ ಉಪೇಂದ್ರ

**ಸಿಹಿ ಕಹಿ ಸುದ್ದಿ,**

**ಬೆಂಗಳೂರು :** ಡೆಡ್ಲಿ ಆರ್ಟ್ಸ್ ಬ್ಯಾನರಡಿಯಲ್ಲಿ ಡೆಡ್ಲಿ ಸೋಮ, ಮಾದೇಶ ಖ್ಯಾತಿಯ ರವಿ ಶ್ರೀವತ್ಸ ನಿರ್ಮಾಣ ಮತ್ತು ನಿರ್ದೇಶನದ ‘ಗ್ಯಾಂಗ್ಸ್ ಆಫ್ ಯುಕೆ ‘ ಚಿತ್ರದ ಆಡಿಯೋ ಮತ್ತು ಟೀಸರ್ ಬಿಡುಗಡೆ ಸಮಾರಂಭ ಕಲಾವಿದರ ಸಂಘದ ಆವರಣದಲ್ಲಿ ಜರುಗಿತು.

ಅತಿಥಿಗಳಾಗಿ ನಿರ್ಮಾಪಕ ಕೆ.ಮಂಜು, ಉಮೇಶ ಬಣಕಾರ, ರಾಧಾಕೃಷ್ಣ ಅಡಿಗ, ಪ್ರವೀಣ ಉದಯ್, ಸೇತು ಮುಕುಂದನ್, ಥ್ರಿಲ್ಲರ್ ಮಂಜು ಮೊದಲಾದ ಸಿನಿ ಗಣ್ಯರು ಹಾಜರಿದ್ದರು. ರಿಯಲ್ ಸ್ಟಾರ್ ಉಪೇಂದ್ರ ಅವರು ಟೀಸರ್ ಬಿಡುಗಡೆ ಮಾಡಿ ಚಿತ್ರಕ್ಕೆ ಶುಭ ಕೋರಿದರು. ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಐ.ಎ ಹಾಗೂ ಸಿ.ಬಿ.ಐ ನ ಪಿ.ಪ್ರಸನ್ನಕುಮಾರ್ ಅವರು ಚಿತ್ರದ ಮೊದಲ ಹಾಡನ್ನು ಬಿಡುಗಡೆ ಮಾಡಿದರು. ಮುಂಬೈ ಸೆನ್ಸಾರ್ ಮಂಡಳಿಯಿಂದ ‘ಎ’ ಸರ್ಟಿಫಿಕೇಟ್ ಪ್ರಮಾಣ ಪತ್ರವನ್ನ 72 ದಿನಗಳ ನಿರಂತರ ಅಲೆದಾಟದ ನಂತರ ಪಡೆದು ಕೊಂಡಾಗಿನ ಕಹಿ ಅನುಭವಗಳನ್ನು, ತೊಂದರೆಗಳನ್ನು ಸೆನ್ಸಾರ್ ಮಂಡಳಿಯ ಒಂದೊಂದೇ ಕರ್ಮಕಾಂಡವನ್ನ ನಿರ್ದೇಶಕರಾದ ರವಿ ಶ್ರೀವತ್ಸ ಅವರು ಶ್ರೀಯುತ ಉಪೇಂದ್ರ, ಕೆ ಮಂಜು, ನಿರ್ಮಾಪಕ ಸಂಘದ ಅಧ್ಯಕ್ಷ ಉಮೇಶ್ ಬಣಕಾರ ಇವರುಗಳ ಮುಂದೆ ಹೇಳಿಕೊಂಡು ಕಣ್ಣೀರಿಟ್ಟರು.



ಬಾಗಲಕೋಟ, ಹೆರಕಲ್, ಶಿರೂರ, ಹುನಗುಂದ, ಇಳಕಲ್ಲ ಸುತ್ತಮುತ್ತ, ಬೆಂಗಳೂರನಲ್ಲಿ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಶಿಶುನಾಳ ಶರೀಫರ ಗೀತೆಗಳನ್ನು ಚಿತ್ರದಲ್ಲಿ ಬಳಸಿ ಕೊಳ್ಳಲಾಗಿದೆ. ರಕ್ತಕ್ಕೆ ರಕ್ತವೇ ಮಜ್ಜನ, ಜಿದ್ದು ಒಬ್ಬರಿಂದ ಒಬ್ಬರಿಗೆ ಹೇಗೆ ವರ್ಗಾಯಿಸಿ ಕೊಂಡು ಹೋಗುತ್ತೆ ಅನ್ನೋ ಕಾನ್ಸೆಪ್ಟ್ ಚಿತ್ರದಲ್ಲಿದೆ. ತಾರಾಂಗಣದಲ್ಲಿ ಒರಟ ಪ್ರಶಾಂತ್,ಕಿಂಗ್ ಮುನಿ,ಸೋನು ಉಪಾಧ್ಯ, ಪೃಥ್ವಿ ಸುಬ್ಬಯ್ಯ, ಕೆ.ಆರ್ ಅಮೋಘ, ಸತ್ಯ, ಕೋಟೆ ಪ್ರಭಾಕರ, ಬಿ.ನವೀನ ಕೃಷ್ಣ, ಜೋತಿಷ್ ಶೆಟ್ಟಿ, ಪದ್ಮವಾಸಂತಿ, ಉಗ್ರಂ ರೆಡ್ಡಿ, ವಿಕಾಸ ಮದಕರಿ, ಕಿರಣ, ದಿಲ್ಲನ್ ಚೆಂಗಪ್ಪ ಗಜೇಂದ್ರಗಡ, ಮಹಾಂತೇಶ ಹಳ್ಳೂರ, ಅಮೃತ್ ಹಿರಣ್ಯ, ಗುರುರಾಜ ಗೌಡ,ನಂಜು ಸಿದ್ದಪ್ಪ,ರಮೇಶ ಮದಗುಂದ, ಸಕ್ಕರೆನಾಡು ಉಮೇಶ್, ಠಂಕಸಾಲಿ ಉಮೇಶ್ ಅಲ್ಲದೆ ಉತ್ತರ ಕರ್ನಾಟಕದ ಸ್ಥಳಿಯ ಕಲಾವಿದರನ್ನೂ ಇದರಲ್ಲಿ ಬಳಸಿ ಕೊಳ್ಳಲಾಗಿದೆ ಎಂದರು. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಆರ್.ಗಿರಿ ಸಂಭಾಷಣೆ ಎಂ.ಎಸ್ ರಮೇಶ, ಸಂಗೀತ ಸುಕುಮಾರ, ಸಾಹಸ ಥ್ರಿಲ್ಲರ್ ಮಂಜು, ಪ್ರಸಾಧನ ರಾಜೇಶ್, ವಸ್ತ್ರ ವಿನ್ಯಾಸ ಪುಟ್ಟರಾಜು, ಸಂಕಲನ ಎಲ್.ಎನ್ ರೆಡ್ಡಿ , ಡಬ್ಬಿಂಗ್ ಆನಂದ, ಎಫೆಕ್ಟ್ಸ್ ಸೇತು, ಪಿ.ಆರ್.ಓ ನಾಗೇಂದ್ರ, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ, ಸಹಾಯಕ ನಿರ್ದೇಶನ ರಾವಣ ಅವರದಿದ್ದು, ಡೆಡ್ಲಿ ಸೋಮ, ಮಾದೇಶ ಚಲನ ಚಿತ್ರಗಳ ಖ್ಯಾತಿಯ ನಿರ್ದೇಶಕ ರವಿ ಶ್ರೀವತ್ಸ, ಅವರ ನಿರ್ದೇಶನ ಚಿತ್ರಕ್ಕಿದು, ನಿರ್ಮಾಪಕರು ರಂಗನಾಥ ರವೀಂದ್ರನಾಥ, ಲಕ್ಷ್ಮೀ ನಾರಾಯಣ ರೆಡ್ಡಿ ಆಗಿದ್ದಾರೆ. ‘ಗ್ಯಾಂಗ್ಸ್ ಆಫ್ ಯು–ಕೆ’ ಚಿತ್ರದ ಟೀಸರ್ ಈಗ ಯ್ಯೂಟ್ಯೂಬ್ ದಲ್ಲಿ ಭರ್ಜರಿ ಸದ್ದು ಮಾಡುತ್ತಿದ್ದು ಒಂದೇ ದಿನದಲ್ಲಿ ಒಂದನೂರ ಇಪ್ಪತ್ತೈದು.ಕೆ ದಾಟಿ ಮುನ್ನುಗ್ಗುತ್ತಿದೆ. ಚಿತ್ರ ಅತಿ ಶೀಘ್ರದಲ್ಲಿ ರಾಜ್ಯದಾದ್ಯಂತ ಬಿಡುಗಡೆ ಯಾಗಲಿದೆ. ಚಿತ್ರ ಗೆದ್ದೆ ಗೆಲ್ಲುತ್ತೆ, ಕರ್ನಾಟಕದ ಜನತೆ ಖಂಡಿತ ಗೆಲ್ಲಿಸುತ್ತಾರೆ ಎಂದು ಭರವಸೆ ಇಟ್ಟು ಕೊಂಡಿರುವದಾಗಿ ನಿರ್ದೇಶಕ ರವಿ ಶ್ರೀವತ್ಸ ಹೇಳಿದ್ದಾರೆ.

**ಡಾ, ಪ್ರಭು ಗಂಜಿಹಾಳ ಮೊ:9448775346**

# ಉಪ ತಹಶೀಲ್ದಾರ್ ಸವಿತಾ ಇವರ ದಕ್ಷ ಮತ್ತು ಜನಪರ ಆಡಳಿತಕ್ಕೆ – ವ್ಯಾಪಕ ಮೆಚ್ಚುಗೆ

**ಸಿಹಿ ಕಹಿ ಸುದ್ದಿ,**

**ಉಡುಪಿ :** ತಾಲ್ಲೂಕ ಕಚೇರಿಯ ಉಪ ತಹಶೀಲ್ದಾರ್ ಸವಿತಾ ಮೇಡಂ ಅವರು ತಮ್ಮ ಪ್ರಾಮಾಣಿಕ ಮತ್ತು ದಕ್ಷ ಸೇವೆಯಿಂದಾಗಿ ಸಾರ್ವಜನಿಕರ ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ ಆಡಳಿತದಲ್ಲಿ, ಇತ್ತೀಚಿಗೆ ನಡೆದ ಚುನಾವಣಾ ಪ್ರಕ್ರಿಯೆ ಯಾವುದೇ ಅಡೆ ತಡೆಗಳಿಲ್ಲದೆ ಸುಗಮವಾಗಿ ನಡೆಯಿತು.

ಚುನಾವಣಾ ಕಾರ್ಯಗಳಲ್ಲಿ ದಕ್ಷತೆ:–

ಚುನಾವಣೆ ಸಮಯದಲ್ಲಿ ಮತದಾರರ ಪಟ್ಟಿಯಿಂದ ಹೆಸರು ತೆಗೆಯುವುದು, ತಿದ್ದುಪಡಿ ಮಾಡುವುದು, ಮತ್ತು ಹೊಸ ಸೇರ್ಪಡೆಯಂತಹ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವುದರಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಅಲ್ಲದೆ, ಚುನಾವಣೆಗೆ ಸಂಬಂಧಿಸಿದ ಬಿಲ್ಲಗಳನ್ನು ಸಕಾಲದಲ್ಲಿ ಪಾವತಿಸುವ ಮೂಲಕ ಜಿಲ್ಲಾಡಳಿತಕ್ಕೆ ಉತ್ತಮ ಗೌರವ ತಂದು ಕೊಟ್ಟಿದ್ದಾರೆ.

ಸಿಬ್ಬಂದಿಯೊಂದಿಗೆ ಉತ್ತಮ ಬಾಂಧವ್ಯ:–

ಸವಿತಾ ಮೇಡಂ ಅವರು ತಮ್ಮ ಕಚೇರಿ ಸಿಬ್ಬಂದಿಗೆ ಪ್ರೀತಿಯ ವ್ಯಕ್ತಿ. ಹೊಸದಾಗಿ ನೇಮಕ ಗೊಂಡ ಸಿಬ್ಬಂದಿಗೆ ತರಬೇತಿ ನೀಡಿ, ಅವರ ಕಾರ್ಯ ಕ್ಷಮತೆಯನ್ನು



ಹೆಚ್ಚಿಸಲು ವೈಯಕ್ತಿಕವಾಗಿ ಗಮನ ಹರಿಸುತ್ತಾರೆ. ಉತ್ತಮ ಸಹಕಾರ ಮತ್ತು ಸಹಬಾಳ್ವೆಯ ಮೂಲಕ ಸಿಬ್ಬಂದಿಯಲ್ಲಿ ಉತ್ತಮ ಸೇವಾ ಮನೋಭಾವ ಬೆಳೆಸಿದ್ದಾರೆ. ಇದು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಹಕಾರಿ ಯಾಗಿದೆ.

ಸಾರ್ವಜನಿಕ ಸ್ನೇಹಿ ಸೇವೆ:–

ಎಷ್ಟೇ ಕೆಲಸದ ಒತ್ತಡವಿದ್ದರೂ, ಸವಿತಾ ಮೇಡಂ ಅವರು ಕಚೇರಿಗೆ ಬರುವ ಸಾರ್ವಜನಿಕರ ಸಮಸ್ಯೆಗಳನ್ನು ಗೌರವ ಮತ್ತು ಸಹಾನುಭೂತಿ ಯಿಂದ ಆಲಿಸುತ್ತಾರೆ. ಹಳೆಯ ದಾಖಲೆಗಳ ಪ್ರತಿಗಳನ್ನು ನೀಡುವುದು, ಅದರಲ್ಲೂ ವಿಶೇಷವಾಗಿ ಮಾಹಿತಿ ಹಕ್ಕು ಅರ್ಜಿಯಂತಹ ವಿಷಯಗಳಲ್ಲಿ ವಿಳಂಬವಿಲ್ಲದೆ ತ್ವರಿತವಾಗಿ ವಿಲೇವಾರಿ ಮಾಡುತ್ತಾರೆ. ಅವರ ಈ ನಡೆ ಸಾರ್ವಜನಿಕರಲ್ಲಿ ಅವರ ಮೇಲೆ ನಂಬಿಕೆ ಮತ್ತು ವಿಶ್ವಾಸ ಹೆಚ್ಚಿಸಿದೆ.

ಸಾರ್ವಜನಿಕರ ಅಭಿಪ್ರಾಯ:–

ಸವಿತಾ ಮೇಡಂ ಅವರ ಈ ದಕ್ಷ ಮತ್ತು ಪ್ರಾಮಾಣಿಕ ಸೇವೆಯನ್ನು ಗುರುತಿಸಿ ಜಿಲ್ಲಾಡಳಿತವು ಅವರಿಗೆ ಪ್ರಶಸ್ತಿ ನೀಡಿದರೆ. ಅದು ಅವರಿಗೆ ಇನ್ನಷ್ಟು ಉತ್ತಮ ಸೇವೆ ಮಾಡಲು ಪ್ರೇರಣೆ ನೀಡುತ್ತದೆ ಎಂದು ಸಾರ್ವಜನಿಕರು ಅಭಿಪ್ರಾಯ ಪಟ್ಟಿದ್ದಾರೆ.

**ವರದಿ:ಆರತಿ.ಗಿಳಿಯಾರು. ಉಡುಪಿ**

# ಪಿಪಿಪಿ ಮಾದರಿ ಮೆಡಿಕಲ್ ಕಾಲೇಜ ವಿರೋಧಿಸಿ ಆಮ್ ಆದ್ಮಿ ಪಕ್ಷ ಪ್ರತಿಭಟನೆ

**ವಿಜಯಪುರ :** ಪಿಪಿಪಿ ಮಾದರಿ ಅಡಿ ವಿಜಯಪುರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಆಮ್ ಆದ್ಮಿ ಪಕ್ಷ (ಎಎಪಿ) ಜಿಲ್ಲಾ ಘಟಕ ಸೋಮವಾರ ತೀವ್ರವಾಗಿ ವಿರೋಧಿಸಿ ಪ್ರತಿಭಟನೆ ನಡೆಸಿತು. ಅನಂತರ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಆಪ್ ಜಿಲ್ಲಾಧ್ಯಕ್ಷ ಬೋಗೇಶ ಸೋಲಾಪುರ ನೇತೃತ್ವದಲ್ಲಿ ಮನವಿಯನ್ನು ಸಲ್ಲಿಸಲಾಯಿತು.




ಈ ಸಂದರ್ಭದಲ್ಲಿ ಎಎಪಿ ಜಿಲ್ಲಾ ಅಧ್ಯಕ್ಷ ಬೋಗೇಶ ಸೋಲಾಪುರ ಮಾತನಾಡಿ, ರಾಜ್ಯಾದ್ಯಂತ 11 ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಯೋಜನೆಯ ಭಾಗವಾಗಿರುವ ಈ ಕ್ರಮವು, ವಿಶೇಷವಾಗಿ ನಮ್ಮ ಸಮಾಜದ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಗೆ ಸಮಾನ ಪ್ರವೇಶವನ್ನು ದುರ್ಬಲಗೊಳಿಸುವ ಬೆದರಿಕೆ ಹಾಕುತ್ತದೆ ಎಂದರು.

ವಿಜಯಪುರ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಸರ್ಕಾರಿ ಅನುದಾನಿತ ಮತ್ತು ನಿರ್ವಹಿಸಲ್ಪಡುವ ವೈದ್ಯಕೀಯ ಕಾಲೇಜನ್ನು ಹೊಂದಬೇಕೆಂಬ ತನ್ನ ಬೇಡಿಕೆಯಲ್ಲಿ ಆಮ್ ಆದ್ಮಿ ಪಾರ್ಟಿ ದೃಢವಾಗಿ ನಿಂತಿದೆ. ಪಿಪಿಪಿ ಮಾದರಿಯು ಶಿಕ್ಷಣವನ್ನು ಲಾಭದಾಯಕ ಉದ್ಯಮವಾಗಿ ಪರಿವರ್ತಿಸುವ ಅಪಾಯವನ್ನುಂಟು ಮಾಡುತ್ತದೆ ಹಾಗೂ ಆರ್ಥಿಕವಾಗಿ ದುರ್ಬಲ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣವನ್ನು ಕೈಗೆಟುಕುವಂತಿಲ್ಲ. ಇದಲ್ಲದೆ, ಕರ್ನಾಟಕದ ಪಿಪಿಪಿ ವೈದ್ಯಕೀಯ ಕಾಲೇಜುಗಳಲ್ಲಿ ಹಿಂದಿನ ಪ್ರಯತ್ನಗಳು ವಿಫಲವಾಗಿವೆ ಎಂದು ಆತಂಕ ವ್ಯಕ್ತಪಡಿಸಿದರು.

ದಕ್ಷತೆ, ಗುಣಮಟ್ಟ ಮತ್ತು ಹೊಣೆಗಾರಿಕೆಯ ಬಗ್ಗೆ ಗಂಭೀರ ಕಳವಳಗಳನ್ನು ಹುಟ್ಟುಹಾಕಿವೆ. ಅಸ್ತಿತ್ವದಲ್ಲಿರುವ ಮೂಲ ಸೌಕರ್ಯದೊಂದಿಗೆ, ವಿಜಯಪುರವು ಉತ್ತರ ಕರ್ನಾಟಕಕ್ಕೆ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯ ದಾರಿದೀಪವಾಗಿ ಕಾರ್ಯ ನಿರ್ವಹಿಸುವ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಬೆಂಬಲಿಸಲು ಉತ್ತಮ ಸ್ಥಾನದಲ್ಲಿದೆ. ಪಿಪಿಪಿ ಮಾದರಿಯ ಮೂಲಕ ಖಾಸಗೀಕರಣವು, ಹೆಚ್ಚಿನ ಶುಲ್ಕಗಳು,

ಕಡಿಮೆ ಪ್ರವೇಶ ಸಾಧ್ಯತೆ ಮತ್ತು ಸಾರ್ವಜನಿಕ ಕಲ್ಯಾಣಕ್ಕಿಂತ ಲಾಭಕ್ಕೆ ಆದ್ಯತೆ ನೀಡುವ ವಾಣಿಜ್ಯತನ ವಿಧಾನಕ್ಕೆ ಕಾರಣವಾಗಬಹುದು ಎಂದು ಬೋಗೇಶ ಸೋಲಾಪುರ ಕಳವಳ ವ್ಯಕ್ತಪಡಿಸಿದರು.

ಸಾಮಾಜಿಕ–ಆರ್ಥಿಕ ಅಂತರವನ್ನು ಕಡಿಮೆ ಮಾಡಲು ಸಾರ್ವಜನಿಕ ಸಂಸ್ಥೆಗಳ ಮೇಲೆ ಹೆಚ್ಚು ಅವಲಂಬಿತವಾಗಿರುವ ಪ್ರದೇಶದಲ್ಲಿ ಇದು ಸ್ವೀಕಾರಾರ್ಹವಲ್ಲ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಮಾಧ್ಯಮ ಉಸ್ತುವಾರಿ ಸಂಜು ಶೆಟಗಾರ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಅವನಾಶ ಐಹೊಳೆ, ಜಿಲ್ಲಾ ಜಂಟಿ ಕಾರ್ಯದರ್ಶಿ ದಾದು ಪಟೇಲ್, ನಗರ ಉಪಾಧ್ಯಕ್ಷ ಅಮೀರ್ ಸೊಹೈಲ್ ಪಟೇಲ್, ನಗರ ಜಂಟಿ ಕಾರ್ಯದರ್ಶಿ ಎ. ಎ. ಗಚ್ಚಿನಮಹಲ್, ಸಿಂದಗಿ ಮತಕ್ಷೇತ್ರದ ಅಧ್ಯಕ್ಷ ಅಶೋಕ ಪಾಟೀಲ, ಬಸವನ ಬಾಗೇವಾಡಿ ಯುವ ಮುಖಂಡ ಯಾಸಿನ್ ಗೋಗಿ ಮತ್ತಿರರು ಉಪಸ್ಥಿತರಿದ್ದರು.



ಜಮಖಂಡಿ: ಶಾಂತಲಿಂಗ ಗಜಾನನ ಉತ್ಸವ ಮಂಡಳಿ, ಬಾಕ್ಷೆ ಗಲ್ಲಿ ಜಮಖಂಡಿ

# ಕನಕದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದ ಉನ್ನತ ಪರಂಪರೆಯ ಕುರುಹುಗಳು: ಡಾ. ಮುಕುಂದರಾಜ

**ವಿಜಯಪುರ :** ಮನುಷ್ಯ ಜಾತಿ ತಾನೊಂದೇ ವಲಂ ಎಂದು ಹೇಳಿ ಜಾತ್ಯತೀತ ತತ್ವವನ್ನು ಸಾರಿದ ಪಂಪ ಮತ್ತು ಕುಲ ಕುಲವೆಂದು ಹೊಡೆದಾಡದಿರಿ ಎಂದು ಸಾರಿದ ಕನಕದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದ ಉನ್ನತ ಪರಂಪರೆಯ ಕುರುಹುಗಳು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ. ಎಲ್.ಎನ್. ಮುಕುಂದರಾಜ ಅವರು ಹೇಳಿದರು.

ನಗರದ ಮಹಿಳಾ ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಯನವಿಭಾಗಗಳವತಿಯಿಂದಶನಿವಾರ ಹಮ್ಮಿಕೊಂಡಿದ್ದ ‘ಕನ್ನಡ ಸಾಹಿತ್ಯ ಪರಂಪರೆ ? ಅವಲೋಕನ’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಯಾವುದೇ ಭಾಷೆಗೆ ಬರದಷ್ಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಭಾಷೆಗೆ ಬಂದಿವೆ. ಇದಕ್ಕೆ ಮುಕುಟಪ್ರಾಯವೆಂಬಂತೆ ಇತ್ತೀಚೆಗೆ ಭಾನು ಮುಸ್ತಾಕ್ ಅವರ ‘ಹೃದಯದ ಹಣತೆ’ ಕೃತಿಗೆ ಅಂತರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿ ಬಂದಿರುವುದು ಕನ್ನಡ ಸಾಹಿತ್ಯ ಪರಂಪರೆಯ ಶ್ರೀಮಂತಿಕೆಯ ದ್ಯೋತಕವಾಗಿದೆ ಎಂದು ವಿಶ್ಲೇಷಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಭಾರತ ಸಂವಿಧಾನವು ಜನತೆಗೆ ನೆಮ್ಮದಿಯ ಬದುಕನ್ನುನೀಡಿದ್ದು,ಹೆಣ್ಣುಮಕ್ಕಳಭವಿಷ್ಯಕ್ಕೆ ಆಶಾಕಿರಣವಾಗಿ ಪರಿಣಮಿಸಿದೆ ಎಂದ




ಅವರು,ಭಾರತಸಂವಿಧಾನಈದೇಶದಹೆಣ್ಣು ಮಕ್ಕಳು ವಿಶ್ವವಿದ್ಯಾಲಯದ ಕುಲಪತಿಗಳು, ರಾಜ್ಯದ ಮುಖ್ಯಮಂತ್ರಿಗಳು, ರಾಷ್ಟ್ರದ ಪ್ರಧಾನಮಂತ್ರಿಗಳು ಮತ್ತು ರಾಷ್ಟ್ರಪತಿಗಳು ಆಗಬಹುದಾದ ಅವಕಾಶಗಳನ್ನು ಸೃಷ್ಟಿಸಿದ್ದು ಈ ಅವಕಾಶಗಳನ್ನು ಈಗಾಗಲೇ ಹಲವು ಮಹಿಳೆಯರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಆ ಮೂಲಕ ನಿಜವಾದ ಮಹಿಳಾ ಸಬಲೀಕರಣ ಸಾಧ್ಯವಾಗಿದೆ ಎಂದರು.

ಪ್ರಾಚೀನ ಕಾಲದಲ್ಲಿಯೇ ಕನ್ನಡ ನಾಡಿನ ಜನರು ಯೋಧರು, ಕವಿಗಳು, ಒಳ್ಳೆಯ ಪ್ರಭುಗಳು, ಸುಂದರರು, ವಿನಯವಂತರು, ಗುಣವಂತರು ಅಭಿಮಾನಿಗಳು, ಉಗ್ರ ಪ್ರತಾಪಿಗಳು, ಗಂಭೀರ ಸ್ವಭಾವದವರು, ವಿವೇಕವಂತರುಆಗಿದ್ದರುಎಂಬುದಕ್ಕೆಕನ್ನಡ ಸಾಹಿತ್ಯದಲ್ಲಿ ಹಲವಾರು ಉದಾಹರಣೆಗಳು ಸಿಗುತ್ತವೆ ಎಂದು ಡಾ.ಮುಕುಂದರಾಜ್ ಹೇಳಿದರು.

ಪತ್ರಕರ್ತ ಡಾ. ಗಣೇಶ ಅಮೀನಗಡ ಮಾತನಾಡಿ, ಹೆಣ್ಣು ಮಕ್ಕಳು ಇನ್‌ಸ್ಟಾಗ್ರಾಂ ಪ್ರೀತಿಗೆ ಮರುಳಾಗದೆ ಎಚ್ಚರಿಕೆಯಿಂದ ಬದುಕಬೇಕು. ಸಾಮಾಜಿಕ ಜಾಲತಾಣದ ದಾಸರಾಗದೆ ಬುದ್ಧಿವಂತಿಕೆಯಿಂದ ಮುಂದುವರಿಯಬೇಕು. ಉನ್ನತ ಹುದ್ದೆಗಳನ್ನು ಪಡೆಯಲು ಶಿಸ್ತುಬದ್ಧ ಅಧ್ಯಯನ ಅತ್ಯಾವಶ್ಯಕವೆಂದು ತಿಳಿಸಿದರು.

ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಸಮಯ ವ್ಯರ್ಥ ಮಾಡದೆ, ಪುಸ್ತಕಗಳನ್ನು ಹಿಡಿದು ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು. ಅಧ್ಯಯನವೇ ಭವಿಷ್ಯ ಕಟ್ಟುವ ನಿಜವಾದ ಬಂಡವಾಳ. ನಿರಂತರ ಅಧ್ಯಯನದಿಂದ ವಿದ್ಯಾರ್ಥಿಗಳ ಯಶಸ್ಸಿಗೆ ದಾರಿ ದೀಪವಾಗಲಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಕುರಿತು ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟು ವಿಜೇತ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ವಿತರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಮಾತನಾಡಿ, ಹೆಣ್ಣುಮಕ್ಕಳು ಮೊಬೈಲ್ ಪ್ರೇಮಪ್ರಕರಣದಿಂದ ಬಲಿಪಶುವಾಗುತ್ತಿರುವುದು ಚಿಂತಾಜನಕವಾಗಿದೆ. ಆದ್ದರಿಂದ, ಸಾಮಾಜಿಕ ಮಾಧ್ಯಮದ ಅತಿ ಹೆಚ್ಚು ಬಳಕೆಯಿಂದ ದೂರವಿದ್ದು, ಎಚ್ಚರಿಕೆಯಿಂದ ನಡೆದುಕೊಳ್ಳಬೇಕು.

ಮಹಿಳೆಯರಮೇಲೆಆಗುವಅತ್ಯಾಚಾರಗಳ ಬಗ್ಗೆ ಜಾಗರೂಕತೆಯೊಂದಿಗೆ ಹೆಣ್ಣು ಮಕ್ಕಳು ತಮ್ಮ ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕು ಎಂದು ಬಲವಾಗಿ ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕ ಅಧ್ಯಯನ ವಿಭಾಗದ ವಿಶೇಷಾಧಿಕಾರಿಗಳಾದ ಪ್ರೊ.ಸಕ್ಪಾಲ್ ಹೂವಣ್ಣ,ಸಂಯೋಜಕರಾದ ಡಾ.ಸೌಭಾಗ್ಯ, ಉಪಸ್ಥಿತರಿದ್ದರು. ಸ್ನಾತಕ ವಿದ್ಯಾರ್ಥಿನಿಯರಾದ ಗೌತಮಿ ನಾಟೇಕರ್, ಶೃತಿ ಕುಲಕರ್ಣಿ, ಅನಿತಾ ಪಾಟೀಲ್ ಪ್ರಾರ್ಥಿಸಿದರು. ಪ್ರೊ.ಎಂ.ನಾಗರಾಜು ಸ್ವಾಗತಿಸಿದರು. ಡಾ. ರೂಪಾ ಇಂಗಳೆ ಅತಿಥಿಗಳನ್ನು ಪರಿಚಯಿಸಿದರು. ಡಾ.ಚಲುವರಾಜು ವಂದಿಸಿದರು. ಡಾ.ಚೇತನಾ ಸಂಕೊಂಡ ನಿರೂಪಿಸಿದರು.

# ಲಿಂ. ಡಾ.ಚೆನ್ನಬಸವ ಶ್ರೀಗಳ ಗದ್ದುಗೆ ನಿರ್ಮಾಣಕ್ಕೆ ಭೂಮಿ ಪೂಜೆ

**ಜಮಖಂಡಿ :** ನಗರದ ಐತಿಹಾಸಿಕ ಓಲೆಮಠದ ಲಿಂಗೈಕ್ಯ ಡಾ. ಅಭಿನವಕುಮಾರ ಚೆನ್ನಬಸವ ಮಹಾಸ್ವಾಮಿಗಳ ಗದ್ದುಗೆ ಮತ್ತು ಮಂಟಪ ನಿರ್ಮಾಣ ಕಾಮಗಾ–ರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿ ಪೂಜೆ ನೆರವೇರಿಸಿದರು.

ಓಲೆಮಠದ ಆವರಣದಲ್ಲಿ ಅಂದಾಜು ಹತ್ತು ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಗದ್ದುಗೆ ಮತ್ತು ಮಂಟಪ ನಿರ್ಮಾಣಕ್ಕೆ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅವರು ಭೂಮಿ ಪೂಜೆ ನೆರವೇರಿಸಿದರು.

ಲಿಂಗೈಕ್ಯ ಡಾ. ಅಭಿನವಕುಮಾರ ಚೆನ್ನಬಸವ ಮಹಾಸ್ವಾಮಿಗಳು ಐದು ಭಾಷೆಗಳಲ್ಲಿ ಪ್ರಾವಿಣ್ಯತೆ ಪಡೆದಿದ್ದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದಿದ್ದರು. ಕನ್ನಡ ಸಾರಸ್ವತ ಲೋಕಕ್ಕೆ 87 ಕೃತಿಗಳನ್ನು



ನೀಡಿದ್ದರು. 2024 ರ ನವೆಂಬರ್ 7 ರಂದು ಲಿಂಗ್ಯಕ್ಯರಾಗಿದ್ದರು.

ಲಿಂಗೈಕ್ಯ ಶ್ರೀಗಳ ಪ್ರಥಮ ಪುಣ್ಯಸ್ಮರಣೆ ವೇಳೆಗೆ ಗದ್ದುಗೆ ಮತ್ತು ಮಂಟಪದ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಓಲೆಮಠದ ಆನಂದ ದೇವರು ಶ್ರೀಗಳು ಮಾಹಿತಿ ನೀಡಿದರು.

ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮದ ಉದ್ದಿಮೆದಾರ ರಾಜು ಗಸ್ತಿ ಗದ್ದುಗೆ ಮತ್ತು ಮಂಟಪ ನಿರ್ಮಾಣದ ಖರ್ಚು–ವೆಚ್ಚ ಭರಿಸುವ ಭಕ್ತಿ ಸೇವೆ ಸಲ್ಲಿಸುವ ವಾಗ್ದಾನ ಮಾಡಿದ್ದಾರೆ.

ರಾಯಲ್ ಪ್ಯಾಲೇಸ್ ಸ್ಕೂಲಿನ ಆಡಳಿತಾಧಿಕಾರಿ ಬಸವರಾಜ ನ್ಯಾಮಗೌಡ, ಕಾಡಪ್ಪ ದೇಸಾಯಿ, ಮಲ್ಲಿಕಾರ್ಜುನ ಲಿಂಗನೂರ, ವಕೀಲ ರವಿ ಯಡಹಳ್ಳಿ, ಚನಬಸು ತೆಲಬಕ್ಕನವರ, ಮಲ್ಲಯ್ಯ ಮಠಪತಿ, ಶಿವಯ್ಯ ನಾಗರಾಳಮಠ, ಎಸ್. ವೈ. ಪಾಟೀಲ ಸದಾನಂದ ಬಾಗೇವಾಡಿ, ಎಸ್. ಎಚ್. ಮಠಪತಿ, ಕಾಡು ಮಾಳಿ, ರಾಜೇಶ್ವರಿ ಹಿರೇಮಠ, ಕಸ್ತೂರಿ ಜೈನಾಪುರ, ವಕೀಲ ಸಿ. ಎಸ್. ಬಾಂಗಿ, ಸಿದ್ರಾಮ ಗೊರನಾಳ, ಎ. ಆರ್. ಶಿಂಧೆ, ಸಿದ್ದಯ್ಯ ಕಲ್ಕತ್ತಿಮಠ, ಬಸವರಾಜ ಬಳಗಾರ, ಪ್ರೇಮ ಬಳೂಲಗಿಡದ, ಶಿವಾನಂದ ಕೊಣ್ಣೂರ, ಡಾ. ಟಿ. ಪಿ. ಗಿರಡ್ಡಿ, ಶಂಕರ ಕಾಳೆ, ಗಣೇಶ ಶಿರಗಣ್ಣವರ, ಪ್ರದೀಪ ಮಹಾಲಿಂಗಪುರಮಠ, ಮಲ್ಲು ದಾನಗೌಡ, ರಾಚಯ್ಯ ಮಠಪತಿ, ಅಜಯ ಕಡಪಟ್ಟಿ ಮತ್ತಿತರರು ಪಾಲ್ಗೊಂಡಿದ್ದರು.

# ಧಾರ್ಮಿಕ ನೆಲೆಗಟ್ಟಿನಲ್ಲಿ ಸಡಗರ ಸಂಭ್ರಮದ ಗಣೇಶೋತ್ಸವ

**ಜಮಖಂಡಿ :** ಇಲ್ಲಿಯ ಗಜಾನನ ಮಹಾಮಂಡಳಗಳು ನಗರದ ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕವಾಗಿ ಗಣೇಶ ಹಬ್ಬವನ್ನು ಬಹಳ ಹಿಂದಿನಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ, ಆಚರಣೆಗೆ ಸಂಸ್ಕೃತಿ ಮತ್ತು ಧಾರ್ಮಿಕ ನೆಲೆಗಟ್ಟು ಇಲ್ಲದೆ ಇತ್ತೀಚೆಗೆ ಗಣೇಶ ಹಬ್ಬ ಹಳಿ ತಪ್ಪುವಂತಾಗಿತ್ತು. ಗಣೇಶ ಹಬ್ಬ ಆಚರಿಸುವ ಸ್ಥಳ, ವಿವಿಧ ಮಂಡಳಿಗಳಪದಾಧಿಕಾರಿಗಳಮಾಹಿತಿಮತ್ತುದೂರವಾಣಿ ಸಂಖ್ಯೆಗಳು ಲಭ್ಯವಿರುತ್ತಿರಲಿಲ್ಲ. ಏನಾದರೂ ಅಹಿತಕರ ಘಟನೆಗಳು ನಡೆದರೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕೆಂಬ ಮಾಹಿತಿಯ ಕೊರತೆ ಇರುತ್ತಿತ್ತು. ಪರಸ್ಥಳದಿಂದ ನರ್ತಕಿಯರನ್ನು ಕರೆಯಿಸಿ ಗಣೇಶ ಮಂಟಪದಲ್ಲಿಯೆ ಅಶ್ಲೀಲ ಡ್ಯಾನ್ಸ್ ಮಾಡಿಸಲಾಗುತ್ತಿತ್ತು. ಗಣಪತಿ ಮಂಟಪದಲ್ಲಿ ಇಸ್ಪೇಟ್‌ನಂತಹ ಜೂಜಾಟ ನಡೆಸುವುದು ಮತ್ತು ಸಾರಾಯಿ ಕುಡಿದು ಅಶ್ಲೀಲ ಹಾಡುಗಳನ್ನು ಹಾಕಿ ಕುಣಿದು ಕುಪ್ಪಳಿಸುವುದು ಸರ್ವೇ ಸಾಮಾನ್ಯವಾಗಿರುತ್ತಿತ್ತು. ಗಣೇಶ ಹಬ್ಬ ತನ್ನ ಮೂಲ ಸ್ವರೂಪ ಮತ್ತು ಉದ್ದೇಶ ಕಳೆದುಕೊಂಡು ಹತೋಟಿ ಮೀರುವ ಹಂತ ತಲುಪಿತ್ತು. ಗಣಪತಿ ಹಬ್ಬ ಆಚರಿಸುವ ಎಲ್ಲ ಮಂಡಳಿಗಳು ಸರ್ಕಾರದ ವಿವಿಧ ಇಲಾಖೆಗಳಿಂದ ಅನುಮತಿ ಪಡೆಯಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆರೆಕಟ್ಟೆಗಳಲ್ಲಿ ಜಲಮಾಲಿನ್ಯ, ಪರಿಸರ ಮಾಲಿನ್ಯ, ಗಣೇಶ ವಿಸರ್ಜನೆಗಾಗಿ ಸಾಗುವ ಮಾರ್ಗದಲ್ಲಿ ಶಬ್ದ ಮಾಲಿನ್ಯ ಇತ್ಯಾದಿ ನಡೆಯುತ್ತಿದ್ದವು. ಎಷ್ಟು ದಿನಗಳವರೆಗೆ ಗಣಪತಿ ಕೂರಿಸಬೇಕು; ಗಣೇಶ ವಿಸರ್ಜನೆಗೆ ಸಮಯ ಮತ್ತು ಸಾಗುವ ಮಾರ್ಗ ನಿಗದಿ ಆಗಿರುತ್ತಿರಲಿಲ್ಲ. ರಾತ್ರಿ ಮೂರು ಗಂಟೆಯವರೆಗೆ ಮತ್ತು ಒಂದೊಂದು ಸಲ ನಸುಕಿನ ನಾಲ್ಕು ಗಂಟೆಯವರೆಗೆ ವಿಸರ್ಜನೆ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಗಣಪತಿ ಮಂಟಪಗಳು ಸಂಸ್ಕೃತಿ ಮತ್ತು ಧಾರ್ಮಿಕ ವಿರೋಧಿ ಚಟುವಟಿಕಗಳ ಅಡ್ಡೆಗಳಾಗುತ್ತಿದ್ದವು. ಗಣಪತಿ ಹಬ್ಬದ ಆಚರಣೆಯನ್ನು ನಿಯಂತ್ರಿಸಲು ಒಂದು ಸಂಘಟನೆ ಇರಲಿಲ್ಲ. ಆಚರಣೆಗೆ ಏಕರೂಪ ನೀತಿ ನಿಯಮಗಳು ಇಲ್ಲದಿರುವುದು ಅದಕ್ಕೆ ಕಾರಣವಾಗಿತ್ತು. ಇದನ್ನೆಲ್ಲ ಗಮನಿಸಿದ ಯುವಕರ ತಂಡ ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಹಲವು ಸಭೆಗಳನ್ನು ಮಾಡಿ ಗಣೇಶೋತ್ಸವಕ್ಕೆ ಸಂಸ್ಕೃತಿ, ಧಾರ್ಮಿಕ ನೆಲೆಗಟ್ಟು ಒದಗಿಸಿ ಶ್ರದ್ಧಾಭಕ್ತಿ, ಸಡಗರ, ಸಂಭ್ರಮದಿಂದ ಹಬ್ಬ ಆಚ-ರಿಸಬೇಕೆಂಬ ಚಿಂತನೆಗಳು ನಡೆದಿದ್ದವು. ಗಣೇಶೋತ್ಸವ ಆಚರಿಸುವ ಎಲ್ಲ ಮಂಡಳಿಗಳನ್ನು ಒಂದು ಸಂಘಟನೆಯ ಅಡಿಯಲ್ಲಿ ತಂದು ನೀತಿ ಮತ್ತು ನಿಯಮಗಳನುಸಾರ ಗಣೇಶೋತ್ಸವ ನಡೆಯಬೇಕು. ಮುಂದಿನ ಪೀಳಿಗೆಗೆ ಸಂಸ್ಕಾರ ಕೊಡಬೇಕು ಎಂಬ ಸದುದ್ದೇಶದಿಂದ 2010 ರಲ್ಲಿ ಶ್ರೀ ಗಜಾನನ ಮಹಾಮಂಡಳವನ್ನು ಹುಟ್ಟು ಹಾಕಲಾಯಿತು. ಅದಕ್ಕೆ 'ಶ್ರೀ ಗಜಾನನ ಮಹಾಮಂಡಳ ಜಮಖಂಡಿ' ಎಂದು ನಾಮಕರಣ ಮಾಡಲಾಯಿತು. ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರನ್ನಾಗಿ ಡಾ. ರಾಕೇಶ ಲಾಡ ಅವರನ್ನು ಆಯ್ಕೆ ಮಾಡಲಾಗಿತ್ತು. ಅಂದಿನಿಂದ ಇಂದಿನವರೆಗೆ ಗಣೇಶ ಹಬ್ಬಕ್ಕೆ ಒಂದು ಕಳೆ ಬಂದಿದೆ. ನಗರದ ವಿವಿಧೆಡೆ ಸ್ವಾಗತ ಕಮಾನುಗಳನ್ನು ಅಳವಡಿಸಲಾಗುತ್ತದೆ. ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತದೆ. ಮಣ್ಣಿನ ಗಣಪತಿಗೆ ಆದ್ಯತೆ ನೀಡಲಾಗುತ್ತದೆ. ನಡೆಸಿದ ಚಿಂತನೆಯ ಹಿನ್ನೆಲೆಯಲ್ಲಿ ಅತ್ಯಂತ ಶ್ರದ್ಧಾಭಕ್ತಿ, ಸಡಗರ ಮತ್ತು ಸಂಭ್ರಮದಿಂದ ಹಬ್ಬವನ್ನು ಆಚರಿಸಲಾಗುತ್ತದೆ. ಮುತ್ತಿನಕಂತಿ ಹಿರೇಮಠದ ಶಿವಲಿಂಗ ಶ್ರೀಗಳು ಮಹಾಮಂಡಳದ ಗೌರವಾಧ್ಯಕ್ಷರಾಗಿರುತ್ತಾರೆ. ಪ್ರಸ್ತುತ 2025 ನೇ ಸಾಲಿಗೆ ಸಚಿನ ಪಟ್ಟಣಶೆಟ್ಟಿ ಅಧ್ಯಕ್ಷರಾಗಿ, ಶ್ರೀಶೈಲ ದೇಬಡಿ ಪ್ರಧಾನ ಕಾರ್ಯದರ್ಶಿ, ಅನಿಲ ಬಾಗಿಮನಿ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಒಟ್ಟು 21 ಜನ ಉಪಾಧ್ಯಕ್ಷರು, 18 ಜನ ಕಾರ್ಯದರ್ಶಿಗಳು ಹಾಗೂ ಸರ್ವ ಸದಸ್ಯರು ಮಹಾಮಂಡಳದಲ್ಲಿದ್ದಾರೆ.

ಗಜಾನನ ಮಹಾಮಂಡಳ 2010 ರಲ್ಲಿ ಸ್ಥಾಪನೆಯಾದಾಗ ನಗರದ ವಿವಿಧ ಬಡಾವಣೆಗಳ ಸುಮಾರು 30–40 ಗಜಾನನ ಮಂಡಳಿಗಳು ಮಹಾಮಂಡಳದ ಸದಸ್ಯತ್ವ ಪಡೆದುಕೊಂಡಿದ್ದವು. ಆದರೆ, ಇಂದು ಸುಮಾರು 108 ಗಜಾನನ ಮಂಡಳಿಗಳು ಮಹಾಮಂಡಳದ ಸದಸ್ಯತ್ವ ಪಡೆದುಕೊಂಡಿವೆ. ಸದಸ್ಯತ್ವ ಪಡೆದಿರುವ ಪ್ರತಿಯೊಂದು ಗಜಾನನ ಮಂಡಳಿಗಳಿಗೆ ಹಬ್ಬದ ಆಚ-ರಣೆಗೆ ಮಂಟಪ ನಿರ್ಮಿಸುವ ಸ್ಥಳಕ್ಕಾಗಿ ಪಿ.ಡಬ್ಲ್ಯೂ.ಡಿ., ವಿದ್ಯುತ್ ಸಂಪರ್ಕಕ್ಕಾಗಿ ಹೆಸ್ಕಾಂ, ಧ್ವನಿವರ್ಧಕ ಬಳಸಲು ಸಿ.ಪಿ.ಐ. ಕಚೇರಿ, ಗಣೇಶ ವಿಸರ್ಜನೆಗೆ ಸಾಗುವ ಮಾರ್ಗ ಮತ್ತು ಕಾನೂನು ಸುವ್ಯವಸ್ಥೆಗಾಗಿ ಶಹರ ಪೊಲೀಸ್ ಠಾಣೆ ಮತ್ತು ನಗರಸಭೆಯ ಅನುಮತಿಗಳನ್ನು ಮಹಾಮಂಡಳದ ವತಿಯಿಂದ ಕೊಡಿಸಲಾಗುತ್ತದೆ. ಎರಡು ಮೂರು ವರ್ಷಗಳಿಂದ ಮನೆ ಮನೆ ಗಣಪತಿ ಅಲಂಕಾರ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗುತ್ತದೆ. ವಿಜೇತರಿಗೆ ಮಹಾಮಂಡಳ ವತಿಯಿಂದ ಬಹುಮಾನ ನೀಡಲಾಗುತ್ತದೆ. ಒಳ್ಳೆಯ ಗಣಪತಿ ಮೂರ್ತಿ, ಉತ್ತಮ ಅಲಂಕಾರ, ಶ್ರೇಷ್ಠ ಸಾಂಸ್ಕೃತಿಕ ಕಾರ್ಯಕ್ರಮ ಹೀಗೆ ಮೂರು ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ತಲಾ ಮೂರರಂತೆ ಒಟ್ಟು ಒಂಭತ್ತು ಬಹುಮಾನಗಳನ್ನು ನೀಡಲಾಗುತ್ತದೆ. ಗಣಪತಿ ಮೂರ್ತಿಯನ್ನು ಮಣ್ಣಿನಿಂದಲೇ ತಯಾ-ರಿಸಿರಬೇಕು. ಮೂರ್ತಿಗೆ ಹಚ್ಚಿದ ಬಣ್ಣಗಳು ಪರಿಸರಕ್ಕೆ ಪೂರಕವಾಗಿರಬೇಕು. ರಾಸಾಯನಿಕ ಬಣ್ಣಗಳನ್ನು ಬಳಸಬಾರದು ಎಂಬ ಷರತ್ತುಗಳನ್ನು ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮಂಡಳಿಗಳು ಪಾಲಿಸಬೇಕಾಗುತ್ತದೆ. ಚುಕ್ಕಿ ರಂಗೋಲಿ ಸ್ಪರ್ಧೆಯನ್ನು ಸಹ ಏರ್ಪಡಿಸಿದ ಉದಾಹರಣೆಗಳಿವೆ. ರಂಗೋಲಿಯನ್ನು ಚುಕ್ಕಿ ಇಟ್ಟು ಬಿಡಿಸಬೇಕು. ಮಿಂಚು, ಸಾಬುದಾನಿ, ಬಳಪ, ಹೂವು ಬಳಸಿ ಬಿಡಿಸಬಾರದು, ಬಿಳಿ ಮತ್ತು ಬಣ್ಣದ ರಂಗೋಲಿ ಪುಡಿಯನ್ನು ಮಾತ್ರ ಬಳಸಬೇಕು, ಫ್ರೀ ಹ್ಯಾಂಡ್ಗೆ ಅವಕಾಶವಿಲ್ಲ. ತಮಗೆ ಬೇಕಾಗುವ ರಂಗೋಲಿ ಪುಡಿಯನ್ನು ಸ್ಪರ್ಧಾಳುಗಳೇ ತರಬೇಕು ಎಂಬ ನಿಯಮಗಳನ್ನು ವಿಧಿಸಲಾಗುತ್ತದೆ.

ಪ್ರತಿ ವಿಭಾಗಕ್ಕೆ ಒಂದರಂತೆ ಒಟ್ಟು ಮೂರು ತೀರ್ಪುಗಾರರ ತಂಡಗಳನ್ನು ಮಹಾಮಂಡಳ ವತಿಯಿಂದ ರಚಿಸಲಾಗುತ್ತದೆ. ತೀರ್ಪುಗಾರರ ತಂಡಗಳಲ್ಲಿ ಶಿಕ್ಷಕರು, ಕಲಾವಿದರು, ಚಿತ್ರಕಲೆಗಾರರು, ಸಂಗೀತಗಾರರು ಸೇ-ರಿದಂತೆ ಪರಿಣಿತರು ಇರುತ್ತಾರೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳ ಬಯಸುವ ಮಂಡಳಿಗಳು ನಿಗದಿತ ದಿನಾಂಕದ ನಿಗದಿತ ಸಮಯದೊಳಗಾಗಿ ವಾಟ್ಸ್‌ಆ?ಯಪ್ ಮೂಲಕ ಅಲಂಕೃತ ಗಣಪತಿ ಮತ್ತು ಮಂಟಪದ ಫೋಟೊಗಳನ್ನು ಕಳುಹಿಸ ಬೇಕಾಗುತ್ತದೆ. ವಾಟ್ಸ್‌ಆ?ಯಪ್ನಲ್ಲಿ ಬರುವ ಫೋಟೊಗಳನ್ನು ಪರಿಶೀಲಿಸಿ ಮೊದಲ ಹತ್ತು ಮಂಡಳಿಗಳನ್ನು ಗುರುತಿಸಲಾಗುತ್ತದೆ. ಗುರುತಿಸಲಾಗುವ ಹತ್ತು ಮಂಡಳಿಗಳಿಗೆ ತೀರ್ಪುಗಾರರ ತಂಡಗಳು ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತದೆ. ಬಹಳ ಪಾರದರ್ಶಕವಾಗಿ ಬಹುಮಾನ ವಿಜೇತ ಮಂಡಳಿಗಳನ್ನು ಆಯ್ಕೆ ಮಾಡಲಾಗುತ್ತದೆ. ಬಹುಮಾನ ವಿಜೇತ ಮಂಡಳಿಗಳಿಗೆ ನೀಡಲು ಬೇಕಾಗುವ ಸ್ಮರಣಿಕೆ, ಪ್ರಮಾಣ ಪತ್ರ,ಶಾಲು,ಹೂಮಾಲೆಇತ್ಯಾದಿಗಳನ್ನುಜನಪ್ರತಿನಿಧಿಗಳು, ಅಧಿಕಾರಿಗಳಿಂದ ಪಡೆದುಕೊಳ್ಳಲಾಗುತ್ತದೆ. ಹಣದ ರೂಪದಲ್ಲಿ ದೇಣಿಗೆಯನ್ನು ಮಹಾಮಂಡಳ ಸ್ವೀಕ-ರಿಸುವುದಿಲ್ಲ. ವಸ್ತುಗಳ ರೂಪದಲ್ಲಿಯೆ ದೇಣಿಗೆಗಳನ್ನು ಸ್ವೀಕರಿಸಲಾಗುತ್ತದೆ. ಉಪವಿಭಾಗಾಧಿಕಾರಿಗಳು, ಪೊಲೀಸ್ ಉಪ ವರಿಷ್ಠಾಧಿಕಾರಿಗಳು, ತಹಶೀಲ್ದಾರರು, ನಗರಸಭೆ ಪೌರಾಯುಕ್ತರು, ಸಿ.ಪಿ.ಐ., ಹೆಸ್ಕಾಂ ಎ.ಇ.ಇ. ಮುಂತಾದವರು ವರ್ಷಕ್ಕೊಬ್ಬರಂತೆ ವಸ್ತು ರೂಪದಲ್ಲಿ ಮಹಾಮಂಡಳಕ್ಕೆ ದೇಣಿಗೆ ನೀಡುತ್ತ ಬಂದಿದ್ದಾರೆ. ಹೊಸದಾಗಿ ಸದಸ್ಯತ್ವ ಪಡೆಯುವ ಮಂಡಳಿಗಳಿಂದ ರೂ.100 ಸದಸ್ಯತ್ವ ಶುಲ್ಕ ವಸೂಲಿ ಮಾಡಲಾಗುತ್ತದೆ. ಸಂಗ್ರಹಿಸಿದ ಸದಸ್ಯ ಶುಲ್ಕದ ಹಣದಲ್ಲಿ ಕೆಲವೊಂದು ಖರ್ಚು–ವೆಚ್ಚಗಳನ್ನು ನಿಭಾಯಿಸಲಾಗುತ್ತದೆ. ಹೀಗಾಗಿ ಅವ್ಯವಹಾರ ಅಥವಾ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವ ಪ್ರಸಂಗ ಉದ್ಭವಿಸದಂತೆ ಮಹಾಮಂಡಳ ನೋಡಿಕೊಳ್ಳುತ್ತಿದೆ. ಬಹುಮಾನ ವಿತರಣೆ ಕಾರ್ಯಕ್ರಮವನ್ನು ಗಣಪತಿ ಪ್ರತಿಷ್ಠಾನದ ಏಳನೆ ದಿನದಂದು ನಗರದ ಹನುಮಾನ್ ಚೌಕಿನಲ್ಲಿ ಆಯೋಜಿಸಲಾಗುತ್ತದೆ. ಕಾರ್ಯಕ್ರಮ ಜರುಗುವ ಒಂದು ಗಂಟೆ ಮುಂಚಿತವಾಗಿ ಮಾತ್ರ ತೀರ್ಪುಗಾರರು ವಿಜೇತ ಮಂಡಳಿಗಳ ಹೆಸರುಗಳನ್ನು ಘೋಷಣೆ ಮಾಡುವ ವಾಡಿಕೆಯನ್ನು ರೂಢಿಸಿಕೊಳ್ಳಲಾಗಿದೆ.

**ಮಹಾಮಂಡಳ ಹುಟ್ಟಿಕೊಂಡಾಗಿನಿಂದ ಸಾಕಷ್ಟು ಒಳ್ಳೆಯ ಪರಿವರ್ತನೆಗಳು ಬಂದಿವೆ. ಮಹಿಳೆಯರು ಸಹ ಗೌರವಯುತವಾಗಿ ಆಚರಣೆಯಲ್ಲಿ ಪಾಲ್ಗೊಳ್ಳುವಂಥ ವಾತಾವರಣ ಸೃಷ್ಟಿಯಾಗಿದೆ. ಆದರೆ, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಒಂದೆಡೆ ಕೂರಿಸಿ 3–4 ದಿನಗಳ ಮಟ್ಟಿಗೆ ಏಕಗವಾಕ್ಷಿ ವ್ಯವಸ್ಥೆ ಮೂಲಕ ಅನುಮತಿ ನೀಡುವ ವ್ಯವಸ್ಥೆ ಜಾರಿಗೆ ಬರಬೇಕು ಎಂಬುದು ಮಹಾಮಂಡಳದ ಸದಾಶಯವಾಗಿದೆ.**

**। ಡಾ. ಟಿ.ಪಿ. ಗಿರಡ್ಡಿ**
**ಪ್ರಾಚಾರ್ಯರು,**
**ಬಸವಜ್ಯೋತಿ ಮಹಾವಿದ್ಯಾಲಯ,**
**ಜಮಖಂಡಿ.**

ಬರಗಾಲ ಬಿದ್ದಾಗ ಕೆರೆಗಳು, ಬಾವಿಗಳು ಬತ್ತಿ ಹೋಗಿ ಗಣೇಶನ ವಿಸರ್ಜನೆಗೆ ಸ್ಥಳಾವಕಾಶ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಂದರ್ಭಗಳಲ್ಲಿ ಮಹಾಮಂಡಳದ ವತಿಯಿಂದ ಮೂರು ಕೃತಕ ಹೊಂಡಗಳನ್ನು ನಿರ್ಮಿಸಿ ನೀರು ತುಂಬಿಸಿ ಗಣೇಶನ ವಿಸರ್ಜನೆಗೆ ಅವಕಾಶ ಮಾಡಿಕೊಟ್ಟ ಕೀರ್ತಿ ಮಹಾಮಂಡಳಕ್ಕೆ ಸಲ್ಲುತ್ತದೆ. ಅದಕ್ಕೆ ದಿವಂಗತ ಶಾಸಕ ಸಿದ್ದು ನ್ಯಾಮಗೌಡ ಹಾಗೂ ನಗರಸಭೆಯ ದಿವಂಗತ ಅಧ್ಯಕ್ಷ ರಾಜು ಪಿಸಾಳ ಅವರ ಸಹಕಾರವನ್ನು ಮಹಾಮಂಡಳ ಸದಾ ಸ್ಮರಿಸುತ್ತದೆ. ಕೊರೊನಾ ಸಾಂಕ್ರಾಮಿಕ ರೋಗ ಹರಡಿದ ಸಂದರ್ಭದಲ್ಲಿ ಹೆಚ್ಚು ಜನರು ಒಂದೆಡೆ ಸೇರುವುದನ್ನು ನಿರ್ಬಂಧಿಸಲಾಗಿತ್ತು. ಕೊರೊನಾ ತಡೆ ನಿಯಮಗಳನ್ನು ಪಾಲನೆ ಮಾಡುತ್ತಲೇ ಗಣಪತಿ ಹಬ್ಬ ಆಚರಣೆಗೆ ಅನುಕೂಲ ಕಲ್ಪಿಸಿದ ಶ್ರೇಯಸ್ಸು ಕೂಡ ಮಹಾಮಂಡಳಕ್ಕಿದೆ. ಕೊರೊನಾ ಕಾಲಘಟ್ಟದಲ್ಲಿ ರೋಗಿಗಳ ಉಪಚಾರಕ್ಕೆ ರಕ್ತದ ಬೇಡಿಕೆ ಬಹಳವಿತ್ತು. ಅದನ್ನು ಗಮನಿಸಿದ್ದ ಮಹಾಮಂಡಳ ರಕ್ತದಾನ ಶಿಬಿರ ಸಂಘಟಿಸಿ 248 ಜನ ದಾನಿಗಳಿಂದ ರಕ್ತ ಸಂಗ್ರಹಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿತ್ತು. ನಗರದ ವಿವಿಧೆಡೆ ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೂ ಮಹಾಮಂಡಳ ಮುಂದಾಗಿದ್ದನ್ನು ಸ್ಮ-ರಿಸಬಹುದು. ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲೂ ಮಹಾಮಂಡಳ ತನ್ನನ್ನು ತೊಡಗಿಸಿಕೊಳ್ಳುತ್ತ ಬಂದಿರುವುದು ಶ್ಲಾಘನೀಯವಾಗಿದೆ.

ಪ್ರತಿ ವರ್ಷ ಗಣೇಶ ಹಬ್ಬಕ್ಕೆ ಸಾಕಷ್ಟು ಮುಂಚಿತವಾಗಿ ಮಹಾಮಂಡಳ ಪದಾಧಿಕಾರಿಗಳ, ವಿವಿಧ ಮಂಡಳಿಗಳ ಪದಾಧಿಕಾರಿಗಳಹಾಗೂವಿವಿಧಧರ್ಮಗಳಮುಖಂಡರ ಶಾಂತಿ ಪಾಲನಾ ಸಭೆಯನ್ನು ಪೊಲೀಸ್ ಠಾಣೆಯಲ್ಲಿ ನಡೆಸಲಾಗುತ್ತದೆ. ಈ ಸಭೆಗೆ ಉಪ ವಿಭಾಗಾಧಿಕಾ-ರಿಗಳು, ಡಿವೈಎಸ್ಪಿ, ನಗರಸಭೆ ಪೌರಾಯುಕ್ತರು, ಸಿ.ಪಿ.ಐ., ಪಿ.ಎಸ್.ಐ. ಮುಂತಾದವರು ಪಾಲ್ಗೊಂಡಿರುತ್ತಾರೆ. ಲಕ್ಕನಕೆರೆ, ಆನೆಕೆರೆ ಹಾಗೂ ಶಾಂತಿನಗರ ಈ ಮೂರು ಕಡೆಗೆ ಗಣೇಶನ ವಿಸರ್ಜನೆಗೆ ಸ್ಥಳಾವಕಾಶ ಮಾಡಿಕೊಡಲಾಗುತ್ತದೆ. ಶಾಂತಿ ನಗರದಲ್ಲಿ ಗಣೇಶನ ವಿಸರ್ಜನೆಗೆ ಕೆರೆ ಅಥವಾ ಬಾವಿ ಇಲ್ಲ. ಆದ್ದರಿಂದ ಕೃತಕ ಹೊಂಡ ನಿರ್ಮಿಸಿ ನೀರು ತುಂಬಿಸಿ ವಿಸರ್ಜನೆಗೆ ಅವಕಾಶ ಮಾಡಿಕೊಡಲಾಗುತ್ತದೆ. ಗಣೇಶ ಹಬ್ಬ ಮುಗಿದ ಮೇಲೆ ಆ ಕೃತಕಹೊಂಡವನ್ನುಮುಚ್ಚುವವ್ಯವಸ್ಥೆಮಾಡುತ್ತಿರುವುದು ವಿಶೇಷವಾಗಿದೆ. ಗಣೇಶನ ವಿಸರ್ಜನೆ ಸ್ಥಳದಲ್ಲಿ ವಿದ್ಯುತ್ ದೀಪದ ಬೆಳಕಿನ ವ್ಯವಸ್ಥೆ ಮಾಡಿಸಲಾಗುತ್ತದೆ. ನಗರಸಭೆ, ಪೊಲೀಸ್ ಇಲಾಖೆಯ ಸಿಬ್ಬಂದಿಗಳನ್ನು ನೇಮಕ ಮಾಡಿ ಸುವ್ಯವಸ್ಥಿತವಾಗಿ ವಿಸರ್ಜನೆ ಕಾರ್ಯ ನಡೆಯುವಂತೆ ನೋಡಿಕೊಳ್ಳಲಾಗುತ್ತದೆ. ಬ್ಯಾರಿಕೇಡ್ಗಳನ್ನು ನಿರ್ಮಿಸಿ ಅಹಿತಕರ ಘಟನೆಗಳು ನಡೆಯದಂತೆ ಜಾಗೃತಿ ವಹಿಸಲಾಗುತ್ತದೆ. ಟೇಬಲ್ ಮತ್ತು ಬ್ಯಾರಲ್ಗಳ ವ್ಯವಸ್ಥೆ ಮಾಡಿ ಗಣೇಶನ ಮೇಲಿನ ಹೂವು, ಕರಿಕೆ ಸಂಗ್ರಹಿಸಿ ಮೊದಲು ಗಣಪತಿಯನ್ನು ಬ್ಯಾರಲ್ನಲ್ಲಿ ವಿಸರ್ಜನೆ ಮಾಡಿಸಿ ಗಣೇಶನಿಗೆ ಹಚ್ಚಿದ ಅರಿಸಿನ, ಕುಂಕುಮ ತೊಳೆದು ಹೋದ ಬಳಿಕ ಕೆರೆಗಳಲ್ಲಿ ಅಂತಿಮವಾಗಿ ವಿಸರ್ಜನೆ ಮಾಡಿಸಲಾಗುತ್ತದೆ.

ಜಾತ್ಯತೀತ ಮತ್ತು ಪಕ್ಷಾತೀತವಾಗಿ ಮಹಾಮಂಡಳದ ಅಧ್ಯಕ್ಷರನ್ನು ಸರ್ವಸಮ್ಮತವಾಗಿ ಆಯ್ಕೆ ಮಾಡಲಾಗುತ್ತದೆ. ಸಮಾನತೆ ದೃಷ್ಟಿಯಿಂದ ಎಲ್ಲ ವರ್ಗದವರಿಗೂ ನ್ಯಾಯ ಒದಗಿಸಲಾಗುತ್ತದೆ. ಆದರೆ, ಮಹಾಮಂಡಳದ ಅಧ್ಯಕ್ಷರಾಗಬೇಕಾದರೆ ಮಹಾಮಂಡಳದ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರಬೇಕು. ಮಹಾಮಂಡಳದ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ. ಮಹಾಮಂಡಳದ ಅಧ್ಯಕ್ಷರ ಅವಧಿ ಒಂದು ವರ್ಷ ಮಾತ್ರ ಇರುತ್ತದೆ. ಈವರೆಗೆ ಡಾ. ರಾಕೇಶ ಲಾಡ, ವಸಂತ ಧರ್ಮದಾಸಾನಿ, ಶ್ರೀಶೈಲ ರಾಂಬಳ್ಳಿ, ನರಸಿಂಹ ನಾಯಕ, ಗಣೇಶ ಶಿರಗಣ್ಣವರ, ಗಿರೀಶ ಮನಗೂಳಿ, ಶ್ರೀಧರ ಕನ್ನೂರ, ರಾಜು ಪಾಟೀಲ, ರುದ್ರಯ್ಯ ಕರಡಿ, ಕುಶಾಲ ವಾಘ್ಮೋರೆ, ಸುನೀಲ ಭೋವಿ ಅಧ್ಯಕ್ಷರಾಗಿದ್ದರು.ಬಹುತೇಕವಿವಿಧಇಲಾಖೆಗಳಅಧಿಕಾ-ರಿಗಳ, ಜನಪ್ರತಿನಿಧಿಗಳ ಹಾಗೂ ಗಣ್ಯರ ಸಹಕಾರದಿಂದ ಮಹಾಮಂಡಳದ ಕಾರ್ಯಗಳು ಸುಗಮವಾಗಿ ಸಾಗಲು ಸಾಧ್ಯವಾಗಿದೆ. ಶಾಸಕ ನಾಡೋಜ ಜಗದೀಶ ಗುಡಗುಂಟಿ ಅವರು ಕೂಡ ಗಜಾನನ ಮಂಡಳಿಗಳಿಗೆ ನಗದು, ಸಕ್ಕರೆ, ಅಕ್ಕಿ ವಿತರಿಸಿ ಹಬ್ಬದ ಆಚರಣೆಗೆ ಪ್ರೋತ್ಸಾಹ ನೀಡಿದ್ದಾರೆ. ಮಹಾಮಂಡಳದ ಕಾರ್ಯಕ್ಕೆ ಬೆನ್ನುತಟ್ಟಿ ಹುರಿದುಂಬಿಸಿದ್ದಾರೆ.

## ಯಶ್ವಂತ್ ಮೇತ್ರಿಗೆ ಸಿದ್ದಯ್ಯ ಪುರಾಣಿ ಸ್ಮಾರಕ ಪ್ರಶಸ್ತಿ ಪ್ರದಾನ




**ಕೊಪ್ಪಳ:** ಕೊಪ್ಪಳಜಿಲ್ಲಾನಾಗರಿಕರ ವೇದಿಕೆ ವತಿಯಿಂದ ನಗರದ ಸಾಹಿತ್ಯ ಭವನದಲ್ಲಿ ಜರುಗಿದ ಕೊಪ್ಪಳ ಜಿಲ್ಲಾ ಉತ್ಸವ ಹಾಗೂ ತಿರುಳು ಗನ್ನಡ ಸಾಂಸ್ಕೃತಿಕ ಸಮ್ಮೇಳನ ದಲ್ಲಿ ಕೊಡ ಮಾಡಿದ 2025 ನೇ ಪ್ರಸಕ್ತ ಸಾಲಿನ ಪ್ರತಿಷ್ಠಿತ ಡಾ, ಸಿದ್ದಯ್ಯ ಪುರಾಣಿಕ್ ಸ್ಮಾರಕ ಪ್ರಶಸ್ತಿಯನ್ನು ಕೊಪ್ಪಳದ ನಿವಾಸಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕದ ವ್ಯವಸ್ಥಾಪಕರಾದ ಯಶ್ವಂತ್ ಕುಮಾರ್ ತಂದೆ ಗಂಗಾಧರ ಮೇತ್ರಿ ರವರ ಉತ್ತಮ ಸೇವೆಗಾಗಿ ಪ್ರಶಸ್ತಿಯನ್ನು ಪ್ರಧಾನ ಮಾಡಿ ಸನ್ಮಾನಿಸಿ ಅಭಿನಂದಿಸಲಾಯಿತು, ಸಿದ್ದಯ್ಯ ಪುರಾಣಿಕ್ ಸ್ಮಾರಕ ಪ್ರಶಸ್ತಿಯನ್ನು ಪುರಸ್ಕೃತ ಯಶ್ವಂತ್ ಕುಮಾರ್ ಮೇತ್ರಿ ರವರು ಕೊಪ್ಪಳ ನಗರದ ನಿವಾಸಿಯಾಗಿದ್ದು ಸರ್ಕಾರಿ ನೌಕರರ ಸಂಘ ಕೊಪ್ಪಳ ಜಿಲ್ಲಾ ಘಟಕದಲ್ಲಿ ಕಳೆದ ಸುಮಾರು ಮೂರು ದಶಕ ಗಳಿಂದ ಸರ್ಕಾರಿ ನೌಕರರ ಸಂಘದ ಸೇವೆ ಸಂಘದ ಸೇವೆಯಲ್ಲಿ ತೊಡಗಿಸಿಕೊಂಡು ಪದಾಧಿಕಾರಿಗಳಿಗೆ ಅಧ್ಯಕ್ಷರಿಗೆ ಸಹಾಯಕರಾಗಿ ಉತ್ತಮ ಸೇವೆ ಸಲ್ಲಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿರುವ ಇವರ ಉತ್ತಮ ಕರ್ತವ್ಯ ಮತ್ತು ಸಮಾಜ ಸೇವೆಯನ್ನು ಪರಿಗಣಿಸಿ ಸದರಿಯವರಿಗೆ ಕೊಪ್ಪಳ ಜಿಲ್ಲಾ ಉತ್ಸವದಲ್ಲಿ ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ಕೊಡ ಮಾಡಿದ ಪ್ರತಿಷ್ಠಿತ ಡಾ, ಸಿದ್ದಯ್ಯ ಪುರಾಣಿಕ ಸ್ಮಾರಕ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ ಎಂದು ಕಾರ್ಯಕ್ರಮ ಸಂಘಟಕರು ತಿಳಿಸಿದ್ದಾರೆ.ಪ್ರಶಸ್ತಿ ಪ್ರಧಾನ ಮಾಡುವ ಸಂದರ್ಭದಲ್ಲಿ ಸಂಘಟಕರಾದ ಮಹೇಶ್ ಬಾಬು ಸುರುವೇ, ವೇದಿಕೆಯ ಜಿಲ್ಲಾಧ್ಯಕ್ಷ ಜಿ.ಎಸ್. ಗೋನಾಳ ,ತಿರುಳುಗನ್ನಡ ಪ್ರತಿಷ್ಠಾನದ ಜಿಲ್ಲಾ ಅಧ್ಯಕ್ಷ ಎಂ ಸಾಧಿಕ್ ಅಲಿ ,ವೇದಿಕೆಯ ರಾಜ್ಯ ಉಪಾಧ್ಯಕ್ಷ ಸಿದ್ದಪ್ಪ ಹಂಚಿನಾಳ, ಗೌರವಾಧ್ಯಕ್ಷ ಎಂ.ಬಿ. ಅಳವಂಡಿ, ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಲದ ನಿಕಟ ಪೂರ್ವ ಅಧ್ಯಕ್ಷರಾದ ಕೋಮಲಾ ಕುದುರಿಮೋತಿ, ನೂತನ ಅಧ್ಯಕ್ಷರಾದ ಮಧು ಪಂಡಿತ್ ಹಡಗಲಿ ,ಉಪಾಧ್ಯಕ್ಷರಾದ ಸುಧಾ ಚೆಕ್ಕಿ ,ಚಲನಚಿತ್ರ ಸಾಹಿತಿ ಮಹೇಶ್ ಮನ್ನಾಪುರ ,ಸಂಗೀತ ಕಲಾವಿದೆ ಅನ್ನಪೂರ್ಣಮ್ಮ ಮನ್ನಾಪುರ, ಸಾಹಿತಿ ಪತ್ರಕರ್ತ ಚನ್ನಬಸಪ್ಪ ಕೊಟ್ಟಿಗಿ ,ರಮೇಶ್ ಸುರ್ವೆ, ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು, ಯಶ್ವಂತ್ ಕುಮಾರ್ ರವರಿಗೆ ಪ್ರಶಸ್ತಿ ಲಭಿಸಿರುವುದಕ್ಕೆ ಅವರ ಸ್ನೇಹಿತರ ಬಳಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ: ಸಿದ್ರಾಮೇಶ್ವರ



**ಕೊಪ್ಪಳ**ಸೆಪ್ಟೆಂಬರ್7ರಂದುಬ್ರಹ್ಮಶ್ರೀನಾರಾಯಣಗುರು ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರುಶುಕ್ರವಾರಉಪವಿಭಾಗಾಧಿಕಾರಿಗಳಕಛೇರಿಯ ಸಭಾಂಗಣದಲ್ಲಿ ಕರೆದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಆಚರಣೆ ಕುರಿತಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿಯನ್ನು ಸೆ. 7 ರಂದು ಸರಳವಾಗಿ ಆಚರಿಸಬೇಕೆಂಬ ಸಮುದಾಯಗಳ ಮುಖಂಡರ ಕೋರಿಕೆ ಮೇರೆಗೆ ಅಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪಾರ್ಚನೆ ಮಾಡಿ ಗೌರವಿಸಲಾಗುವುದು. ಈ ಸಂದರ್ಭದಲ್ಲಿ ಸಮಾಜದ ಮುಖಂಡರು ಉಪಸ್ಥಿತರಿರಬೇಕೆಂದು ಹೇಳಿದರು.

ಜಯಂತಿ ದಿನದಂದು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳು ಹಾಗೂ ಸರಕಾರಿ ಕಛೇರಿಗಳಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿಯನ್ನು ಆಚರಿಸಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ ಅಂಗವಾಗಿ ಜಿಲ್ಲಾಡಳಿತ ಭವನದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಮತ್ತು ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪುಷ್ಪಲತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ್,

ಆರ್ಯ ಈಡಿಗ ಸಮಾಜದ ಜಿಲ್ಲಾಧ್ಯಕ್ಷರಾದ ಕಾಶಿವಿಶ್ವನಾಥ, ತಾಲ್ಲೂಕಾಧ್ಯಕ್ಷ ಈರಣ್ಣ ಹುಲಿಗಿ, ಉಪಾಧ್ಯಕ್ಷ ಎ.ವಿ.ರವಿ, ಮುಖಂಡರಾದ ರಾಜಣ್ಣ ಈಳಿಗೇರ್, ಚಂದ್ರ, ಈಳಿಗೇರ್, ಅನಿಲ್ ಹುಲಿಗಿ, ಮಂಜುನಾಥ ಈಳಿಗೇರ್, ಅರುಣಕುಮಾರ್ ಗಂಗಾವತಿ ಸೇರಿದಂತೆ ಮತ್ತಿತರರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಿಶ್ವಕರ್ಮ ಜಯಂತಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ: ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ



**ಕೊಪ್ಪಳ :** ಸೆಪ್ಟೆಂಬರ್ 18ರಂದು ಜಿಲ್ಲಾ ಕೇಂದ್ರದಲ್ಲಿ ವಿಶ್ವಕರ್ಮ ಜಯಂತಿಯನ್ನು ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅವರು ಶುಕ್ರವಾರ ಉಪವಿಭಾಗಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಕರೆದ ವಿಶ್ವಕರ್ಮ ಜಯಂತಿ ಆಚರಣೆ ಕುರಿತಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಸೆಪ್ಟೆಂಬರ್ 17ರಂದು ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ನಡೆಯುವ ಹಿನ್ನೆಲೆಯಲ್ಲಿ ವಿಶ್ವಕರ್ಮ ಜಯಂತಿಯನ್ನು ಸೆ. 17ರ ಬದಲಿಗೆ ಸೆ. 18ಕ್ಕೆ ಆಚರಣೆ ಮಾಡಲಾಗುವುದು.ಜಿಲ್ಲೆಯಎಲ್ಲಾಸರ್ಕಾರಿ ಕಛೇರಿಗಳು, ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ತಾಲ್ಲೂಕಾ ಕಛೇರಿ, ಗ್ರಾಮ ಪಂಚಾಯತಗಳಲ್ಲಿ, ಶಾಲಾ, ಕಾಲೇಜು ಹಾಗೂ ವಸತಿ ನಿಲಯಗಳಲ್ಲಿ ವಿಶ್ವಕರ್ಮ ಜಯಂತಿಯನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕಾಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು. ಜಿಲ್ಲಾ ಕೇಂದ್ರದಲ್ಲಿ ವಿಶ್ವಕರ್ಮ ಜಯಂತಿ ಆಚರಣೆಗಾಗಿ ಸಂಬಂಧಿಸಿದ ಇಲಾಖೆಗಳು ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು. ಸೆ. 18ರ ಬೆಳಿಗ್ಗೆ 9 ಗಂಟೆಗೆ ನಗರದ ಸಿರಸಪ್ಪಯ್ಯನ ಮಠದ ಆವರಣದಿಂದ ಗಡಿಯಾರ ಕಂಬ ಮಾರ್ಗವಾಗಿ ಸಾಹಿತ್ಯ ಭವನದವರೆಗೆ ವಿಶ್ವಕರ್ಮರ ಭಾವಚಿತ್ರದ ಮೆರವಣಿಗೆ ಮತ್ತು ಬೆಳಿಗ್ಗೆ 10.30 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಪೂಜೆ, ವಿಶ್ವಕರ್ಮರ ಕುರಿತು ವಿಶೇಷ ಉಪನ್ಯಾಸ ಹಾಗೂ ಇತರೆ ಕಾರ್ಯಕ್ರಮಗಳು ನಡೆಯಲಿದೆ.

ಮೆರವಣಿಗೆ ಸಾಗುವ ಮಾರ್ಗ ಹಾಗೂ ವೇದಿಕೆ ಕಾರ್ಯಕ್ರಮ ನಡೆಯುವ ಸಾಹಿತ್ಯ ಭವನದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ನಗರಸಭೆಯಿಂದ ಕಲ್ಪಿಸಬೇಕು. ವೇದಿಕೆ ಅಲಂಕಾರ, ಗಣ್ಯರಿಗೆ ಪುಸ್ತಕ ವಿತರಣೆ, ಪೂಜೆಗೆ ಹೂವು, ಹಾರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒದಗಿಸಬೇಕು. ಶಿಷ್ಠಚಾರದಂತೆ ಆಮಂತ್ರಣ ಪತ್ರಿಕೆ, ಗಣ್ಯರ ಆಹ್ವಾನಕ್ಕೆ ತಹಶೀಲ್ದಾರರು ಕ್ರಮ ವಹಿಸಬೇಕು.

ಉಳಿದಂತೆ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಜಯಂತಿ ಆಚರಣೆಗೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಸಮಾಜದ ಬಂಧುಗಳ ಸಹಕಾರವೂ ಅಗತ್ಯವಿದ್ದು, ಜಿಲ್ಲಾಡಳಿತದೊಂದಿಗೆ ಸಹಕರಿಸಿ ವ್ಯವಸ್ಥಿತ ಜಯಂತಿ ಆಚರಣೆಗೆ ಎಲ್ಲಾ ಸಮಾಜದವರು ಅನುಕೂಲ ಮಾಡಿಕೊಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.

ಸಭೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪುಷ್ಪಲತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ್, ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷರಾದ ನಾಗೇಶ ಕುಮಾರ್ ಕಂಸಾಳ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾದ ದೇವೇಂದ್ರಪ್ಪ ಬಡಿಗೇರ್ ರಾಜೂರು, ಸಮಾಜದ ಮುಖಂಡರಾದ ಈಶಪ್ಪ ಬಡಿಗೇರ್ ನರಸಾಪುರ, ರುದ್ರಪ್ಪ ಬಡಿಗೇರ್, ಗುರುಮೂರ್ತಿ ಬಡಿಗೇರ್, ಶಂಕ್ರಪ್ಪ ತಿಮ್ಮರಗುದ್ದಿ, ವೀರೇಶ ಕಾರಟಗಿ, ದೇವಪ್ಪ ಬಡಿಗೇರ್ ಹಲಗೇರಿ, ಪ್ರಭಾಕರ ಬಡಿಗೇರ್ ಗುಳದಳ್ಳಿ, ಕಾಳಮ್ಮ ಪತ್ತಾರ್, ಪ್ರಕಾಶ, ಬ್ರಹ್ಮನಾಂದ ಬಡಿಗೇರ್ ಸೇರಿದಂತೆ ಇನ್ನೂ ಪ್ರಮುಖರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬಾಲಚಂದ್ರ ಗುಣಕಿ ನಿಧನ



**ರಬಕವಿ :** ಇಲ್ಲಿಯ ಬಣಗಾರ (ನಾಗಲಿಕ) ಸಮಾಜದ ಹಿರಿಯರಾಗಿದ್ದ ಬಾಲಚಂದ್ರ ಗುಣಕಿ ಅವರು ತಮ್ಮ 78 ನೆಯ ವಯಸ್ಸಿನಲ್ಲಿ ಆಗಸ್ಟ್ 30 ರಂದು ಸಾಯಂಕಾಲ ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಮೂರು ಜನ ಸುಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

## ಬಸವರಾಜ ಚ. ಕುಚನೂರ ನಿಧನ



**ರಬಕವಿ :** ಇಲ್ಲಿಯ ವಿದ್ಯಾನಗರದ ನಿವಾಸಿ, ಕುರುಹಿನಶೆಟ್ಟಿ ಸಮಾಜದ ಬಸವರಾಜ ಚನಬಸಪ್ಪ ಕುಚನೂರ ಅವರು ಸಪ್ಟೆಂಬರ್ ಒಂದರಂದು ತಮ್ಮ 58 ನೆಯ ವಯಸ್ಸಿನಲ್ಲಿ ನಿಧನರಾದರು.

ಮೃತರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

## 49ನೇ ವಿಮಾ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಬೈಕ್ ರ್‍ಯಾಲಿ

**ರಬಕವಿ-ಬನಹಟ್ಟಿ:** ಅವಳಿ ನಗರದಲ್ಲಿ ಎಲ್‌ಐಸಿ ವಿಮಾ ಪ್ರತಿನಿಧಿಗಳಿಂದ 49 ನೇ ವಿಮಾ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ವಿಮಾ ಮಾಹಿತಿ ನೀಡುವ ಸಲುವಾಗಿ ಬೈಕ್ ರ್‍ಯಾಲಿ, ಬನಹಟ್ಟಿ ಸ್ಪಿನ್ನಿಂಗ ಮಿಲ್ಲಿನಿಂದ ರಬಕವಿಯ ಸೆಟ್ಲೆಂಟ್ ಆಫೀಸಿನವರೆಗೆ ನಡೆಯಿತು.

ಈಸಂದರ್ಭದಲ್ಲಿರ್‍ಯಾಲಿಗೆರಬಕವಿಯಶಾಖಾಧಿಕಾರಿಪ್ರಕಾಶಕಾಂಬಳೆ ಚಾಲನೆ ನೀಡಿದರು. ಅಭಿವೃದ್ಧಿ ಅಧಿಕಾರಿ ಡಿ. ಬಾಪುಗೌಡ, ರಾಜೇಂದ್ರ ಹುನ್ನೂರ, ಕಾಳೆ, ಪ್ರತಿನಿಧಿಗಳಾದ ಅಶೋಕ ವಸ್ತ್ರದ, ಮಲ್ಲಿಕಾರ್ಜುನ ಕುಂಚನೂರ, ಮುರಿಗೆಪ್ಪ ಭಿಲವಡಿ, ಸತೀಶ ಮೋಟಗಿ, ಸಿದ್ದು ಪಾಟೀಲ, ಸಿದ್ದಪ್ಪ ಮೇಣಿ, ಪ್ರಕಾಶ ಯರಗಟ್ಟಿ, ಶಿವಾನಂದ ಕೆಂಚಪ್ಪನವರ, ಜ್ಯೋತಿ ಹ್ಯಾವಿನ, ಗಂಗಾಧರ ಜವಳಗಿ, ಈರಣ್ಣ ಹಲಗತ್ತಿ, ಈರಣ್ಣ ಸಪ್ತಸಾಗರ, ಎಸ್. ಪಿ. ಬಾಗಿ, ಶಿವಲಿಂಗಯ್ಯ ಮಠಪತಿ ಸೇರಿದಂತೆ ಇನ್ನೂ ಅನೇಕರು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.



ತರಕಾರಿಯಲ್ಲಿ ದೊರೆತ ಗಣೇಶನ ಹೋಲುವ ಚಿತ್ರ.



ನಂದಿಗಣೇಶ ಆಟೋ ಚಾಲಕರ ಸಂಘ ಜಮಖಂಡಿ

## ಮಹಿಳಾ ಕ್ರಿಕೆಟ್: ಸಜ್ಜಲಶ್ರೀ ನರ್ಸಿಂಗ್ ಕಾಲೇಜು ಪ್ರಥಮ

**ಬಾಗಲಕೋಟೆ :** ಮೇಜರ್ ಧ್ಯಾನಚಂದ್ ರವರ ಹುಟ್ಟುಹಬ್ಬ (ಆಗಸ್ಟ್ 29)ದ ಪ್ರಯುಕ್ತ ಮಹಿಳೆಯರಿಗಾಗಿ ಆಯೋಜಿಸಲಾಗಿತ್ತು, ಈ ಕ್ರಿಕೆಟ್ ಪಂದ್ಯಾವಳಿಯನ್ನು ಬಾಗಲಕೋಟೆ ಲೋಕಸಭಾ ಸದಸ್ಯ ಪಿ.ಸಿ ಗದ್ದಿಗೌಡರ ರವರು ಉದ್ಘಾಟಿಸಿದರು. ಕ್ರೀಡಾಕೂಟದಲ್ಲಿ ಒಟ್ಟು 06 ಮಹಿಳಾ ತಂಡಗಳು ಭಾಗವಹಿಸಿದ್ದು, ಬಿ.ವಿ.ವಿ.ಎಸ್ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಮಹಿಳಾ ಕ್ರಿಕೆಟ್ ತಂಡ ಪ್ರಥಮ ಸ್ಥಾನವನ್ನು ಹಾಗೂ ಬಿ.ವಿ.ವಿ.ಎಸ್ ಫಿಜಿಯೋಥೆರಪಿ ಕಾಲೇಜ್, ಬಾಗಲಕೋಟೆ ಇವರು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಸಂಗಪ್ಪ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ , ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಮತ್ತು ಬಾಗಲಕೋಟೆ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಹಾಜರಿದ್ದರು.

### ಯುವಜನೋತ್ಸವ-2025 | ಹೆಚ್.ಐ.ವಿ/ಏಡ್ಸ್ ಅರಿವು ಕಾರ್ಯಕ್ರಮ

# ರಸಪ್ರಶ್ನೆ ಸ್ಪರ್ಧೆ: ವಿಜೇತರಿಗೆ ಬಹುಮಾನ ವಿತರಣೆ

**ಬಾಗಲಕೋಟೆ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕದ ಸಂಯುಕ್ತ ಆಶ್ರಯದಲ್ಲಿ ಯುವಜನೋತ್ಸವ-2025 ರ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ರಸಪ್ರಶ್ನೆಸ್ಪರ್ಧೆ ಹಮ್ಮಿಕೊಳ್ಳಲಾಗಿ-ತ್ತು.

ಜಿಲ್ಲೆಯ ಬಾಗಲಕೋಟೆ, ಬಾದಾಮಿ, ಬಿಳಗಿ, ಹುನಗುಂದ ತಾಲೂಕಿನ ಸರಕಾರಿ, ಅನುದಾನ, ಅನದಾನ ರಹಿತ ಪ್ರೌಢ ಶಾಲೆಗಳ 8 ಮತ್ತು 9 ನೇ ತರಗತಿಯ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಜಿಲ್ಲಾ ಆರೋಗ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭಾಭವನ ನಡೆದ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಚಿಕ್ಕಮುಚ್ಚಳಗುಡ್ಡ ಸರಕಾರಿ ಆದರ್ಶ ವಿದ್ಯಾಲಯದ (ಆರ್. ಎಂ.ಎಸ್ಎ) ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ. ದ್ವಿತೀಯ ಸ್ಥಾನವನ್ನು ಹುನಗುಂದ ವಿ.ಎಂ ಬಾಲಕಿಯರ ಪ್ರೌಢಶಾಲೆ ಪಡೆದರೆ, ತೃತೀಯ ಸ್ಥಾನವನ್ನು ನವನಗರದ ಶರಣ ಬಸವೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿಗಳು ಪಡೆದುಕೊಂಡಿತು. ವಿಜೇತರಿಗೆ ಪ್ರಥಮ 6 ಸಾವಿರ, ದ್ವಿತೀಯ 5 ಸಾವಿರ ಹಾಗೂ ತೃತೀಯ 4 ಸಾವಿರರೂ.ಗಳನಗದು,ಪ್ರಮಾಣ ಪತ್ರ ಹಾಗೂ ಮೆಡಲ್‌ಗಳನ್ನು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಸುವರ್ಣ ಕುಲಕರ್ಣಿ ಅವರು ವಿತರಿಸಿದರು. ಸ್ಪರ್ಧೆಯಲ್ಲಿ ಸಾಮಾನ್ಯ ಆರೋಗ್ಯ, ಆರೋಗ್ಯ ದಿನಗಳು, ಹದಿಹರೆಯದವರ ಆರೋಗ್ಯ ಸೇರಿದಂತೆ ಮುಟ್ಟಿನ ನೈರ್ಮಲ್ಯ ಆಹಾರ ಪದ್ಧತಿ, ಹೆಚ್‌ಐವಿ, ಏಡ್ಸ್ ಮೂಲಗಳು ಮತ್ತು ಸೇವೆಗಳು, ವ್ಯಾಕ್ಸಿನೇಷನ್‌ಗಳು, ಯುನಿಸೆಫ್, ಡಬ್ಲೂಎಚ್‌ಓ, ಯೂನೆಸ್ಕೋ ಮುಂತಾದ ಅಂತರಾಷ್ಟ್ರೀಯ ಸಂಸ್ಥೆಯ ಮುಖ್ಯಸ್ಥರು, ಹಾಗೂ ಕ್ಷಯರೋಗ, ಸ್ವಯಂ ಪ್ರೇರಿತ ರಕ್ತದಾನ ಮತ್ತು ಇತರ ರಾಜ್ಯ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ವಿಷಯಗಳ ಮೇಲೆ ನಡೆಸಲಾಗಿತ್ತು.



ಸದರಿ ರಸಪ್ರಶ್ನೆ ಸ್ಪರ್ಧೆಯಲ್ಲಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ ತಾಲೂಕಿನ ಒಟ್ಟು41ಪ್ರೌಢ ಶಾಲೆಯ ಒಟ್ಟು82 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕದ ಜಿಲ್ಲಾ ಮೇಲ್ವಿಚಾರಕ ಎಂ.ಎಚ್. ಸುಭೇದಾರ ನಡೆಸಿಕೊಟ್ಟರು.

# ಸಮೀಕ್ಷೆ ಇಲ್ಲದೇ ಒಳಮೀಸಲಾತಿ ಘೋಷಣೆ ಅನ್ಯಾಯ: ಕುಮಾರ ಮಹಾರಾಜ

**ಬಾಗಲಕೋಟೆ :** ಮೀಸಲಾತಿ ಕುರಿತಂತೆಸರ್ಕಾರಕೈಗೊಂಡಿರುವ ಅವೈಜ್ಞಾನಿಕ ವರ್ಗೀಕರಣವನ್ನು ಖಂಡಿಸಿಬಂಜಾರಸಮಾಜದಿಂದ ಸೆಪ್ಟೆಂಬರ್ 6ರಂದು ನವನಗರದ ಜಿಲ್ಲಾಡಳಿತ ಭವನದ ಎದುರು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಂಜಾರ ಸಮಾಜದ ಶಕ್ತಿ ಪೀಠದ ಕುಮಾರ ಮಹಾರಾಜರು ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು "ಸರ್ಕಾರ ದೋಷಪೂರಿತ ದತ್ತಾಂಶವನ್ನು ಆಧಾರ ಮಾಡಿಕೊಂಡು ಪರಿಶಿಷ್ಟ ಜಾತಿ ಮೀಸಲಾತಿ ವರ್ಗೀಕರಣ ಮಾಡಿದೆ. ಇದರಿಂದ ಲಂಬಾಣಿ, ಭೋವಿ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳಿಗೆ ಅನ್ಯಾಯವಾಗಿದೆ. ನಮ್ಮ ತಾಂಡಾಗಳಲ್ಲಿ ಯಾವ ಸಮೀಕ್ಷೆಯೂ ನಡೆದಿಲ್ಲ. ಆದರೂ ಸರ್ಕಾರವು ತಕ್ಷಣದಲ್ಲೇ ಒಳಮೀಸಲಾತಿ ಘೋಷಿಸಿದೆ" ಎಂದು ಹೇಳಿದರು.




ಹಿಂದಿನ ಬಿಜೆಪಿ ಸರ್ಕಾರ ನಾಲ್ಕು ಜಾತಿಗಳಿಗೆ 4.5% ಹಾಗೂ ಅಲೆಮಾರಿ ಸಮುದಾಯಗಳಿಗೆ 1% ಮೀಸಲಾತಿ ನೀಡಿತ್ತು. ಆದ-ರೆ ಈಗಿನ ಕಾಂಗ್ರೆಸ್ ಸರ್ಕಾರ 63 ಜಾತಿಗಳನ್ನು ಸೇರಿಸಿ 5% ಒಳಮೀಸಲಾತಿ ನೀಡಿರುವುದು ಎಲ್ಲಾ ಸಮುದಾಯಗಳಿಗೆ ಹಾನಿಕಾರಕವಾಗಿದೆ.

ಜೊತೆಗೆ ಎಡಗೈ-ಬಲಗೈ ಸಮುದಾಯಗಳ ನಡುವೆ ಭಿನ್ನತೆ ಉಂಟುಮಾಡಿದೆ" ಎಂದು ಆರೋಪಿಸಿದರು. ಈ ಅನ್ಯಾಯದ ವಿರುದ್ಧವಾಗಿ ಸೆಪ್ಟೆಂಬರ್ 10ರಂದು 'ಬೆಂಗಳೂರು ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದಾಗಿ ಮಹಾರಾಜರು ಘೋಷಿಸಿದರು.

ಸುದ್ದಿಗೋಷ್ಠಿಯಲ್ಲಿ ರಂಗನಗೌಡ ಗೌಡರ,ನಾಗೇಶಪೂಜಾರಿ,ರತ್ನಪ್ಪ ರಾಠೋಡ, ಹೂವಪ್ಪ ರಾಠೋಡ, ನಿಂಗಪ್ಪ ಚವ್ಹಾಣ, ಸೋಮಸಿಂಗ ಲಮಾಣಿ, ಉಮೇಶ ರಾಠೋಡ, ಸುರೇಶ ಲಮಾಣಿ ಸೇರಿದಂತೆ ಇತರರು ಇದ್ದರು.

## ರಬಕವಿ ಬನಹಟ್ಟಿ ತಾಲೂಕಿನ ಅಸುಂಡಿ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿ ಅರ್ಜಿ ಆಹ್ವಾನ

**ಬಾಗಲಕೋಟೆ :** ರಬಕವಿ-ಬನಹಟ್ಟಿ ತಾಲೂಕಿನ ಆಸಂಗಿ ಗ್ರಾಮದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ಮಂಜೂರಾತಿಗಾಗಿ ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಸೆಪ್ಟೆಂಬರ್ 29 ರಂದು ಸಂಜೆ 5.30 ಗಂಟೆ. ಅರ್ಜಿ ಸಲ್ಲಿಸುವ ಸಂಸ್ಥೆಗಳು ಕನಿಷ್ಠ 3 ವರ್ಷಗಳಿಂದ ಸಹಕಾರಿ ಸಂಘವಾಗಿ ಕಾರ್ಯನಿರ್ವಹಿಸಬೇಕು. ಹಿಂದಿನ ಎರಡು ವರ್ಷಗಳಲ್ಲಿ ಕನಿಷ್ಠ ರೂ.2 ಲಕ್ಷಗಳ ಬ್ಯಾಂಕ್ ಬ್ಯಾಲೆನ್ಸ್ ಇರುವುದು ಕಡ್ಡಾಯ. ಜೊತೆಗೆ, ನ್ಯಾಯಬೆಲೆ ಅಂಗಡಿಗಾಗಿ ಅಗತ್ಯವಾದಷ್ಟ ಸ್ಥಳಾವಕಾಶವಿರುವ ಕಟ್ಟಡದ ಮಾಲೀಕತ್ವದ ದಾಖಲೆ ಅಥವಾ ಬಾಡಿಗೆ ಕರಾರು ಪತ್ರ ಸಲ್ಲಿಸಬೇಕು. ಅಂಗಡಿ ಅಳತೆಯ ದಾಖಲೆಗಳೂ ಕಡ್ಡಾಯ. ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಇಲ್ಲ ಎಂಬ ಅಫಿಡವಿಟ್ ಸಲ್ಲಿಸಬೇಕಾಗುತ್ತದೆ. ಖಾಸಗಿ ವ್ಯಕ್ತಿಗಳಿಗೆ ಅರ್ಜಿ ಅವಕಾಶವಿಲ್ಲ. ಆದರೆ ವಿಕಲಚೇತನರು ಹಾಗೂ ತೃತೀಯ ಲಿಂಗದ ಅರ್ಜಿದಾರರು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಇವರು ವೈದ್ಯಕೀಯ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ ಸಲ್ಲಿಸಬೇಕು ಹಾಗೂ ಕನಿಷ್ಠ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವುದರ ಅಂಕಪಟ್ಟಿ ಸಲ್ಲಿಸಬೇಕು.

ಅರ್ಜಿಯ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ತಹಶೀಲ್ದಾರ್, ರಬಕವಿ-ಬನಹಟ್ಟಿ ಅಥವಾ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾಧಿಕಾರಿಗಳ ಕಚೇರಿ ಬಾಗಲಕೋಟೆ ಸಂಪರ್ಕಿಸಬಹುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸದೃಢ ಸಮಾಜಕ್ಕೆ ಸಹಕಾರಿ ಕ್ಷೇತ್ರ ಶ್ರಮಿಸಲಿ: ಜವಳಗಿ

**ರಬಕವಿ-ಬನಹಟ್ಟಿ :** ಸಂಕಷ್ಟದಲ್ಲಿರುವ ಕಟ್ಟಕಡೆಯ ಶ್ರಮಿಕ ವ್ಯಕ್ತಿಯ ಸಬಲೀಕರಣ-ಕ್ಕೆ ಸಹಕಾರಿ ಕ್ಷೇತ್ರವು ಪ್ರಾಮಾಣಿಕ ಪ್ರಯತ್ನ ಮಾಡಿದ್ದಲ್ಲಿ ಬಡತನವೆಂಬ ಭೂತವನ್ನು ಸಮಾಜದಿಂದ ಅಳಿಸಿ ಸದೃಢ ಸಮಾಜವನ್ನು ನಿರ್ಮಿಸಲು ಸಾಧ್ಯವೆಂದು ಹಟಗಾರ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಸಂಜಯ ಜವಳಗಿ ಹೇಳಿದರು.

ಬನಹಟ್ಟಿಯ ಸಿದ್ರಾಮೇಶ್ವರ ಸಮುದಾಯ ಭವನದಲ್ಲಿ ನಡೆದ ಕಾಡಸಿದ್ಧೇಶ್ವರ ವಿದ್ಯುತ್ಚಾಲಿತ ಮಗ್ಗಗಳ ಸಹಕಾರಿ ಸಂಘದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು,

ಜನರ ಏಳ್ಗೆಗೆ ಸದಾ ಹಾತೊರೆಯುವ ಸಂಘಗಳಾಗಬೇಕು. ಸಂಘದ ಅಭಿವೃದ್ಧಿಯ ಜೊತೆಗೆ ಸಮಾಜವನ್ನೂ ಅಭಿವೃದ್ಧಿಗೊಳಿಸುವ ಮೂಲಕ ಜನರ ಆರ್ಥಿಕ ಸಬಲೀಕರಣಕ್ಕೆ ಮುಂದಾಗಬೇಕಾಗಿರುವುದು ಸಹಕಾರಿ ಕ್ಷೇತ್ರದ ಮೊದಲ ಆದ್ಯತೆಯಾಗಿದೆ ಎಂದರು.



ಸಂಘದ ಅಧ್ಯಕ್ಷ ಶಂಕ್ರಯ್ಯ ಕಾಡದೇವರ ಮಾತನಾಡಿ, ಸದಸ್ಯರೆಲ್ಲರೂ ಒಗ್ಗಟ್ಟಿನಿಂದ ಅಭಿವೃದ್ಧಿ ಪಡಿಸಿದಾಗ ಮಾತ್ರ,

ಸಹಕಾರಿ ಕ್ಷೇತ್ರ ಬಲಿಷ್ಠವಾಗಲು ಸಾಧ್ಯ. ಯಾರ ಸ್ವಹಿತಕ್ಕಾಗಿ ಮಣೆ ಹಾಕದೆ ನಿಯಮಾನುಸಾರ ಸಂಘಗಳ ಬೆಳವಣಿಗೆಗೆ ಆದ್ಯತೆ ನೀಡಬೇಕೆಂದರು.

ಪ್ರಸಕ್ತ ವರ್ಷ 1.46 ಲಕ್ಷ ರೂ.ಗಳಷ್ಟು ಲಾಭ ಮಾಡಿದೆ.

ಮಂಜುಳಾ ಮಂಡಿ, ಅಶೋಕ ಬಾಣಕಾರ, ಈರಪ್ಪ ಬರಗಲ್ಲ, ಶಂಕರ ಕೆಸರಗೊಪ್ಪ, ಚನಮಲ್ಲಪ್ಪ ಬೀಳಗಿ, ಶಶಿಧರ ಬೀಳಗಿ, ಶೇಖರ ಹಕ್ಕಲದಡ್ಡಿ, ಮೋಹನ ಬೀಳಗಿ, ಆನಂದಯ್ಯಾ ರೇವಣಸಿದ್ದಯ್ಯಗೋಳ, ಅಶ್ವಿನಿ ಅಂಬಲಿ, ಸುರೇಶ ಭಜಂತ್ರಿ, ರವಿ ಚನಪನ್ನವರ, ರವಿಚಂದ್ರ ನಾಗರಾಳ, ಹೈದರಲಿ ಝಾರೆ, ಸಿದ್ದಪ್ಪ ದೊಡಮನಿ, ಬಸವರಾಜ ಮೋಟಗಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕಡಪಟ್ಟಿ ಜೋಡು ಬಸವಣ್ಣನ ದೇವಸ್ಥಾನಕ್ಕೆ ಸಭಾಪತಿ ಹೊರಟ್ಟಿ ಭೇಟಿ

**ಜಮಖಂಡಿ :** ತಾಲೂಕಿನ ಕಡಪಟ್ಟಿ-ಹಂಚಿನಾಳ ಗ್ರಾಮದ ಕಡಪಟ್ಟಿಯ ಜೋಡುಬಸವಣ್ಣನದೇವಸ್ಥಾನಗಳಿಗೆ ಸೋಮವಾರ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭೇಟಿ ನೀಡಿ ದರ್ಶನ ಪಡೆದರು.

ದೊಡ್ಡ ಬಸವಣ್ಣನ ದೇವಸ್ಥಾನ ಟ್ರಸ್ಟ ಕಮಿಟಿ ಅಧ್ಯಕ್ಷ ಮಹಾದೇವ ಇಟ್ಟಿ ಸಹಿತ ಇತರರು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಅರ್ಧಕ್ಕೆ ಸ್ಥಗಿತಗೊಂಡಿರುವ ಸಮುದಾಯ ಭವನ ನಿರ್ಮಾಣಕ್ಕೆ 1.5ಕೋಟಿಅನುದಾನಸರಕಾರದಿಂದ ನೀಡುವಂತೆ ಮನವಿ ಸಲ್ಲಿಸಿದರು.



ನಂತರ ಪವಾಡ ಬಸವಣ್ಣನ ದೇವಸ್ಥಾನಕ್ಕೆ ತೆರಳಿದ ಬಸವಣ್ಣನ ದರ್ಶನ ಪಡೆದು ಪವಾಡ ಬಸವಣ್ಣ ಸುಧಾರಣಾ ಸಮಿತಿ ವತಿಯಿಂದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ಗುರುಪಾದ ಇಟ್ಟಿ,

ಮಹಾದೇವ ಇಟ್ಟಿ, ಎಸ್. ಎಸ್. ಕಾಡದೇವರ, ಪಿಡಿಓ ಸುರೇಶ ಕಡಪಟ್ಟಿ, ಸಚಿನ ಪೂಜಾರಿ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

# ದುಡ್ಡು ಪಡೆದು ಮತದಾನ ಮಾಡಿದವರಿಗೆ ಅಭಿವೃದ್ಧಿ ಬಗ್ಗೆ ಕೇಳುವ ನೈತಿಕತೆಯಿಲ್ಲ

**ಜಮಖಂಡಿ :** ದುಡ್ಡು ಪಡೆದು ಮತ ಹಾಕಿದವರು ಅಭಿವೃದ್ಧಿ ಕುರಿತು ಕೇಳಲು ಅವರಲ್ಲಿ ಏನು ನೈತಿಕತೆ ಇದೆ? ದುಡ್ಡಿನ ಆಸೆಗೆ ಮತವನ್ನು ಮಾರಾಟಗೈದ ಮತದಾರರು ಅಭಿವೃದ್ಧಿ ಬಗ್ಗೆ ಕೇಳುವ ನೈತಿಕತೆಯನ್ನು ಕಳೆದುಕೊಂಡಿರುತ್ತಾರೆ. ನಾನು ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಕೆಲಸ ಮಾಡುವಂತೆ ಒತ್ತಾಯಿಸಬಹುದು ಅಷ್ಟೇ ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ರಮಾ ನಿವಾಸ ಸಭಾಭವನದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬೆಂಗಳೂರು, ಮೈಸೂರು, ಉಡುಪಿ ಮುಂತಾದ ಕ್ಷೇತ್ರಗಳಂತೆ ಉತ್ತರ ಕರ್ನಾಟಕದ ಜಿಲ್ಲೆಗಳು ಅಭಿವೃದ್ಧಿಯಾಗಬೇಕು. ಉತ್ತರ ಕರ್ನಾಟಕದಲ್ಲಿ 96 ಜನ ಶಾಸಕರಿದ್ದರೂ ಕೂಡಅಭಿವೃದ್ಧಿಕಾರ್ಯಗಳಾಗುತ್ತಿಲ್ಲವೆಂಬ ದೂರುಗಳು ಕೇಳಿ ಬರುತ್ತವೆ. ದಕ್ಷಿಣ ಕನ್ನಡದ ಶಾಸಕರಂತೆ ತಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಸಮಯ ನೀಡಬೇಕು. ರಾಜ-ಕೀಯ ಇಚ್ಛಾಶಕ್ತಿಯಿಂದ ತೀವ್ರ ಒತ್ತಡ ತರುವ ಮೂಲಕ ಸರ್ಕಾರದಿಂದ ಕೆಲಸ ಮಾಡಿಸಿಕೊಳ್ಳಬೇಕು. ಅಭಿವೃದ್ಧಿ ಎಂದು ಬರೀ ಬಾಯಿಯಲ್ಲಿ ಜಪಿಸಿದರೆ ಆಗದು. ಉತ್ತರ ಕರ್ನಾಟಕದ ಎಲ್ಲ ಶಾಸಕರು ಒಗ್ಗಟ್ಟಾಗಿ ಅಭಿವೃದ್ಧಿಯ ಮಂತ್ರ ಜಪಿಸಿದರೆ ಎಲ್ಲ ಜಿಲ್ಲೆಗಳು ಅಭಿವೃದ್ಧಿಯತ್ತ ಸಾಗಲು ಸಾಧ್ಯ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಉತ್ತರ ಕರ್ನಾಟಕ ಭಾಗದ ಕೆಲಸಗಳಾಗುತ್ತಿಲ್ಲ.



ಮತಕ್ಷೇತ್ರದ ರಾಜಕಾರಣಿಗಳು ತಮ್ಮ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಮುತುವರ್ಜಿ ವಹಿಸಬೇಕು ಎಂದರು.

ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯುಂಟಾಗಿದೆ. ಈ ಕುರಿತು ತಾವು ಹೋದ ಕಡೆ ದೂರುಗಳು ಕೇಳಿ ಬಂದಿವೆ. ಸರ್ಕಾರಕ್ಕೆ ಈ ಕುರಿತು ಶೀಘ್ರವಾಗಿ ಮಾತನಾಡುವ ಮೂಲಕ ಕೂಡಲೇ ಕ್ರಮ ಜರುಗಿಸುವಂತೆ ತಿಳಿಸುತ್ತೇನೆ. ಸ್ಥಳದಲ್ಲಿಯೇ ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ ಸಮಸ್ಯೆ ಕುರಿತು ಕ್ರಮ ಜರುಗಿಸುವಂತೆ ಆದೇಶಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್ವಸತಿ ಕೇಂದ್ರಗಳಲ್ಲಿ ಶಾಲೆಗಳ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ಸರ್ಕಾರಕ್ಕೆ ಮತ್ತು ಸದನದಲ್ಲಿ ಮಾಹಿತಿ ನೀಡಿದ್ದು, ಯಾವುದೇ ಕೆಲಸವಾಗುತ್ತಿಲ್ಲ ಎಂದು ಶಾಸಕ ಜಗದೀಶ ಗುಡಗುಂಟಿ ಸಭಾಪತಿಗಳ ಗಮನ ಸೆಳೆದರು.

ಅದಕ್ಕೆ ಉತ್ತರಿಸಿದ ಅವರು ಸರ್ಕಾರ ಮುಳುಗಡೆ ಕೆಲಸವನ್ನು ಪೂರ್ಣಗೊಳಿಸಬೇಕು. ಸರ್ಕಾರ ಅನುದಾನ ನೀಡುತ್ತಿಲ್ಲ ಕೆಲಸಗಳಾಗುತ್ತಿಲ್ಲ. ಶಿಕ್ಷಕರ ಕೊರತೆ, ಶಾಲಾ ಕಟ್ಟಡಗಳ ದುರಸ್ತಿ ಇನ್ನಿತರ ಕೆಲಸಗಳಾಗಬೇಕಿದೆ. ಅದಕ್ಕಾಗಿ ಸರ್ಕಾರದ ಗಮನ ಸೆಳೆಯುತ್ತೇನೆ ಎಂದರು. ರಸ್ತೆಗಳ ಅಭಿವೃದ್ಧಿ, ದುರಸ್ತಿಯ ಕು-ರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸರ್ಕಾರದ ಗಮನಕ್ಕೆ ತರುತ್ತೇನೆ. ತಾವು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಶಿಕ್ಷಕರ ನೇಮಕಾತಿ, ವರ್ಗಾವಣೆ ನೀತಿ ಸಹಿತ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಪ್ರಸಕ್ತ ಸಚಿವರಿಗೆ ಸಮಸ್ಯೆಗಳ ಮಾಹಿತಿ ನೀಡುವ ಕೆಲಸ ಮಾಡಲು ಮಾತ್ರ ನಮ್ಮಿಂದ ಸಾಧ್ಯ ಎಂದರು.

ಶಾಸಕ ಜಗದೀಶ ಗುಡಗುಂಟಿ, ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಶೀಲ್ದಾರ ಅನೀಲ ಬಡಿಗೇರ, ಪಿ.ಎಸ್.ಐ. ಅನೀಲ ಕುಂಬಾರ, ಸುರೇಶಗೌಡ ಪಾಟೀಲ, ಮಲ್ಲು ದಾನಗೊಂಡ, ಮಹಾದೇವ ಇಟ್ಟಿ ಸಹಿತ ಹಲವರು ಉಪಸ್ಥಿತರಿದ್ದರು.

## ಆಸೆ ಮನುಷ್ಯನನ್ನು ಸರ್ವನಾಶ ಮಾಡುವುದು-ಶ್ರೀಶೈಲಯ್ಯ ಸ್ವಾಮೀಜಿ



**ರಬಕವಿ-ಬನಹಟ್ಟಿ :** ಆಸೆ ಮನುಷ್ಯನನ್ನು ಸರ್ವನಾಶ ಮಾಡುವುದಷ್ಟೆ ಅಲ್ಲದೆ ಉತ್ತಮ ಸಂಬಂಧಗಳನ್ನು ಹಾಳು ಮಾಡುತ್ತದೆಂದು ಶ್ರೀಶೈಲ್ಲಯ್ಯ ಸ್ವಾಮೀಜಿ ಹಿರೇಮಠ ಹೇಳಿದರು.

ಅವರು ತಾಲೂಕಿನ ನಾವಲಗಿ ಗ್ರಾಮದ ಜೈ ಹನುಮಾನ್ ಗಜಾನನ ಉತ್ಸವ ಕಮೀಟಿ ವತಿಯಿಂದ ಜರುಗಿದ ಪ್ರವಚನದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತು. ಸಂಸಾರ ಹುಟ್ಟಿದಲ್ಲಿ ಆಸೆ ಹುಟ್ಟಿತು. ಆಸೆ ಎಂಬುದು ಓಡುವುದಕ್ಕೆ ಹಚ್ಚುತ್ತದೆ. ಪ್ರತಿಯೊಬ್ಬರೂ ಹೆಣ್ಣು, ಹೊನ್ನು, ಮಣ್ಣಿಗಾಗಿ ಕಿತ್ತಾಡಿದ್ದಾರೆಯೆ ಹೊರತು ಒಂದು ದಿನವೂ ಭಗವಂತನ ಸೇವೆಗಾಗಿ ಮುಂದಾಗಿಲ್ಲ. ಮನುಷ್ಯ ಆಸೆ ಪಡುವುದು ಸಹಜ. ಆದರೆ ದುರಾಸೆ ಪಡಬಾರದು. ಒಂದು ಶ್ರಮದ ಬೆವರಿನ ಹನಿ ಹತ್ತು ತೀರ್ಥ ಕ್ಷೇತ್ರಕ್ಕೆ ಸಮಾನವಾಗಿದೆ. ಮಾನವ ಜನ್ಮ ಬಹು ದೊಡ್ಡದು. ಇರುವಷ್ಟು ದಿನಗಳಲ್ಲಿ ಪುರಾಣ ಪ್ರವಚನ ಸತ್ಸಂಗದಲ್ಲಿ ತೊಡಗಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಮಾಡುವ ಕಾರ್ಯಗಳಿಂದ ಪುಣ್ಯ ಪಾಪಗಳ ಫಲಾಫಲ ದೊರೆಯುವುದು. ಸನಾತನ ಹಿಂದೂ ಧರ್ಮದ ಆಚಾರ ವಿಚಾರ ಪದ್ಧತಿ ಸಂಸ್ಕಾರ ಸಂಸ್ಕೃತಿಯನ್ನು ಯುವ ಪೀಳಿಗೆಗೆ ಪರಿಚಯಿಸಬೇಕಿದೆ. ಹಬ್ಬಗಳ ಆಚರಣೆಯಿಂದ ಬಾಂಧವ್ಯ ಗಟ್ಟಿಗೊಳಿಸುವುದು. ಜೊತೆಗೆ ದೇಶಿಯ ಕಲೆಗಳ ಮೂಲಕ ಆಚರಿಸುವಂತಾಗಲಿ ಎಂದು ಹೇಳಿದರು.

ವೇದಿಕೆಯ ಮೇಲೆ ಮಧುರಖಂಡಿಯ ಪ್ರವಚನಕಾರ ಬಸಯ್ಯ ಶಾಸ್ತ್ರಿ, ನಾವಲಗಿಯ ಬಸಯ್ಯ ಸ್ವಾಮೀಜಿ ಹಿರೇಮಠ, ಈರಪ್ಪ ಬಡಿಗೇರ, ಅಶೋಕ ಆಸಂಗಿ, ಶ್ರೀಶೈಲ ಹಳ್ಳಿ, ವೆಂಕಪ್ಪ ಬಿಮಾನಿ, ಸಂಗಪ್ಪ ಪಟ್ಟಣಶೆಟ್ಟಿ, ಕುಮಾರ್ ಹಿರೇಮಠ, ಕಾಂತು ಹಳ್ಳಿ, ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ತಹಸೀಲ್ದಾರರಿಗೆ ಮನವಿ




**ವಿಜಯಪುರ :** ಜಿಲ್ಲೆಯ ಚಡಚಣ ತಾಲೂಕಿನ ರೈತರಿಗೆ ಸರಿಯಾಗಿ ರಸ ಗೊಬ್ಬರ ಸಿಗದೇ ಸಂಕಷ್ಟದಲ್ಲಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಹಸೀಲ್ದಾರ್ ಎಸ್. ಬಿ. ಇಂಗಳೆ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮನವಿ ಸಲ್ಲಿಸಿ ಮಾತನಾಡಿ,

ತಾಲೂಕಿನಲ್ಲಿ ಕಾಳ ಸಂತೆಯಲ್ಲಿ ಗೊಬ್ಬರವನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಜೊತೆಗೆ ಲಿಂಕ್ ಗೊಬ್ಬರ ಕಡ್ಡಾಯವಾಗಿ ತೆಗೆದುಕೊಳ್ಳಬೇಕು ಎಂದು ರೈತರಿಂದ 1500 ರೂ ರಿಂದ 2000 ರೂ ವರೆಗೆ ಕೇಳುತ್ತಿದ್ದಾರೆ.

ಹೆಚ್ಚಿಗೆ ಕೇಳಿದರೆ ಗೊಬ್ಬರ ಇಲ್ಲ ಎಂದು ಮರಳಿ ಕಳಿಸುತ್ತಿದ್ದಾರೆ ಎಂದರು.

ಈ ವರ್ಷದಲ್ಲಿ ಎಷ್ಟು ಗೊಬ್ಬರ ಬಂದಿದೆ. ಯಾವ ಅಂಗಡಿಯವರಿಗೆ ಕೊಟ್ಟಿದ್ದೀರಿ.

ಅಂಗಡಿಯ ಮುಂಭಾಗದಲ್ಲಿ ದರ ಹಾಗೂ ಸ್ಟಾಕ್ ಲಿಸ್ಟ್ ಕಡ್ಡಾಯವಾಗಿ ಹಾಕಬೇಕು.

ಜೊತೆಗೆ ಕಳಪೆ ಮಟ್ಟದ ಗೊಬ್ಬರ ಹಾಗೂ ಕೀಟನಾಶಕ ನೆರೆಯ ಮಹಾರಾಷ್ಟ್ರದಿಂದ ಮಾರಾಟ ಮಾಡಲಾಗುತ್ತಿದೆ.

ಇದು ಅಲ್ಲದೆ ಉಪ್ಪಿನ ಜೊತೆ ಬಣ್ಣ ಮಿಕ್ಸ್ ಮಾಡಿ ಗೊಬ್ಬರವೆಂದು 2000 ರೂ. ಕ್ಕೆ ಮಾರಾಟ ಮಾಡಲಾಗುತ್ತಿದೆ ಎಂದು ರೈತರು ಹೇಳುತ್ತಿದ್ದಾರೆ.

ಕೂಡಲೇ ಅಂತವರ ಮೇಲೆ ಸೂಕ್ತ ಕಾನೂನು ಕ್ರಮ ಕೈಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮುಖಂಡರಾದ ಮಹದೇವ ಬನಸೋಡೆ ಹಾಗೂ ವಸಂತ ಬೈರಾಮಡಿ ಮಾತನಾಡಿ, ಕಳೆದ 4-5 ವರ್ಷಗಳಲ್ಲಿ ಈ ಭಾಗದ ರೈತರು ವಿಮೆ ತುಂಬಿ ಸಾಕಷ್ಟು ಪ್ರಮಾಣದಲ್ಲಿ ಬೆಳೆ ನಷ್ಟಗೊಂಡರೂ ಪರಿಹಾರ ಬಂದಿಲ್ಲ ಹಾಗೂ ಈ ಸಲ ಅತೀ ಹೆಚ್ಚು ಮಳೆ ಆಗಿರುವುದರಿಂದ ರಾಜ್ಯ ಮತ್ತು ಕೇಂದ್ರ ವಿಪತ್ತು ನಿರ್ವಹಣಾ ಅಡಿಯಲ್ಲಿ ಪರಿಹಾರ ನೀಡಬೇಕು ಎಂದರು.

ಹಿರಿಯರಾದ ಮುರುಗೇಂದ್ರ ಶಿಂಪಿ ಅವರು ಮಾತನಾಡಿ, ತಾಲೂಕಿನಲ್ಲಿ ರೈತರ ಜಮೀನಿನಲ್ಲಿಯ ಮೋಟರಗಳನ್ನು ಕಳವು ಮಾಡುತ್ತಿರುವ ಖದೀಮರನ್ನು ಹಿಡಿದು ತಕ್ಕ ಶಿಕ್ಷೆ ಕೊಡಬೇಕು. ಸಾಕಷ್ಟು ಪ್ರಕರಣಗಳು ಬೆಳಕಿಗೆ ಬಂದರೂ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

ಈ ಮೇಲಿನ ಎಲ್ಲಾ ಬೇಡಿಕೆಗಳನ್ನು ಶೀಘ್ರದಲ್ಲಿ ಈಡೇರಿಸದಿದ್ದರೆ ಚಡಚಣ ತಾಲೂಕು ಬಂದ್ ಮಾಡಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಎಸ್. ಬಿ. ಇಂಗಳೆ, ಪಿ. ಎಸ್. ಐ. ಪ್ರವೀಣಕುಮಾರ ಹಾಗೂ ಕೃಷಿ ಅಧಿಕಾರಿ ಇದ್ದರು

ಈ ವೇಳೆ ಮುರುಗೇಶ ಸಿಂಪಿ, ವಸಂತ ಬೈರಾಮಡಿ, ಮಹಾದೇವ ಬನಸೋಡೆ ,

ಪ್ರಕಾಶ ಭತಗುಣಕಿ, ಸೋಮಶೇಖರ ಬಡಿಗೇರ, ಶಕೀಲ್ ಕಾಟಿಕ್,

ಮಹಾದೇವ ಸಿಂಧೆ, ರಮೇಶ ಬತಗುಣಕಿ, ಸಾಯಿನಾಥ ಬನಸೂಡೆ, ಉಜ್ವಲ ಡೊಳ್ಳಿ, ಪ್ರಭಾಕರ್ ನಿರಾಳೆ, ಅಂಬರೀಶ ಬೈರಗೊಂಡ, ರಮೇಶ ನಾವಿ, ಸೈದು ಕೊಡವನ, ಮುರ್ತುಜ ನದಾಫ,

ಮಾಳಪ್ಪ ನಾವಿ, ದ್ಯಾಮಗೊಂಡ ಕಾಂಬಳೆ, ಆಂಜನೇಯ ಜಡಪೇಕರ,

ರಾಮಣ್ಣ ತೇಲಿ, ತಿಪ್ಪಣ್ಣ ವಾಗ್ಮೊರೆ, ದಯಾನಂದ ಶಿಂಧೆ ಸೇರಿದಂತೆ ನೂರಾರು ರೈತರು ಉಪಸ್ಥಿತರಿದ್ದರು.

# ಗುರುವೆಂದರೆ ಜ್ಞಾನದ ಆತ್ಮನಿದ್ದಂತೆ:ಉಪಮನ್ಯು ಶಿವಾಚಾರ್ಯ ಶ್ರೀಗಳು



**ವಿಜಯಪುರ :** ಅನಾದಿ ಕಾಲದಿಂದಲೂ ಗುರುವನ್ನು ಗೌರವಿಸುವ ಶ್ರೇಷ್ಠ ಸಂಸ್ಕೃತಿ, ಪರಂಪರೆ ಭಾರತದಲ್ಲಿದೆ.

ಗುರುವೆಂದರೆ ಜ್ಞಾನದ ಆತ್ಮನಿದ್ದಂತೆ ಎಂದು ಬೀದರ ಜಿಲ್ಲೆಯ ಐನಾಪುರ ಹಿರೇಮಠದ ಷ ಬ್ರ ಉಪಮನ್ಯು ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸೋಮವಾರದಂದು ತಾಲೂಕಿನ ನಾಗಠಾಣ ಗ್ರಾಮದ ಉದಯಲಿಂಗೇಶ್ವರ ಮಠದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮಳ ಪುರಾಣ ಮಹಾಮಂಗಲ ಹಾಗೂ ಧರ್ಮಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಗುರು ಪರಂಪರೆಗೆ ನಮ್ಮ ನಾಡಿನಲ್ಲಿ ದೊಡ್ಡ ಇತಿಹಾಸವೇ ಇದೆ. ಗುರು ಎಂದರೆ ಜನರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ರಾಜಮಾರ್ಗ ಎಂದು ಹೇಳಿದರು.

ಅಗರಖೇಡ ವಿರಕ್ತಮಠದ ಮ.ನಿ. ಪ್ರ ಅಭಿನವ ಸಿದ್ದಲಿಂಗೇಶ್ವರ ಮಹಾಸ್ವಾಮೀಜಿ ಮಾತನಾಡಿ, ಗುರುವು ಅಂತರಂಗದ ಬೆಳಕನ್ನು ಬೆಳಗುತ್ತ, ಬದುಕಿಗೆ ಮಾರ್ಗದರ್ಶಿಯಾಗಿ ಮೋಕ್ಷವನ್ನು ನೀಡುತ್ತಾನೆ. ಆತ ಇಡೀ ಮನುಕುಲಕ್ಕೆ ದಾರಿ ತೋರುವ ಮಹಾನುಭಾವ ಎಂದು ಹೇಳಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಮ.ಘ.ಚ ಚನ್ನಮಲ್ಲಿಕಾರ್ಜುನ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಗುರುವಿನಲ್ಲಿ ದೇವರನ್ನು ಕಾಣುವ ಪರಂಪರೆ ನಮ್ಮದು. ತಂದೆ, ತಾಯಿ, ಗುರುವನ್ನು ಗೌರವಿಸುವಂಥ ಸಂಸ್ಕೃತಿ ನಮ್ಮದು. ಹರ ಪೂಜೆ, ಗುರು ಸೇವೆ ಬದುಕಿನಲ್ಲಿ ಮುಖ್ಯ ಎಂದು ಹೇಳಿದರು.

ಬೊಮ್ಮನಹಳ್ಳಿ ಗವಿಮಠದ ಷ. ಬ್ರ. ಗುರುಶಾಂತ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ರೂಡಗಿ ವಿರಕ್ತಮಠದ ಷ ಬ್ರ ಅಭಿನವ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಯಾದಗಿರಿಯ ಬಸವೇಶ್ವರ ಸ್ವಾಮೀಜಿ, ಮಡ್ಡಿ ಮಣೂರದ ಸಂಗಮೇಶ ಸ್ವಾಮೀಜಿ, ಬಸವನ ಬಾಗೇವಾಡಿಯ ಮುತ್ತಯ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಪರಮಾನಂದ ದೇವರ ಪಟ್ಟದ ಪೂಜಾರಿ ಶರಣಬಸು ಪೂಜೇರಿ, ಪುರಾಣಿಕರಾದ ಉಮರಾಣಿಯ ಮುರುಗೇಂದ್ರ ಶಾಸ್ತ್ರಿ, ಗಾಯಕ ವಿರುಪಾಕ್ಷಯ್ಯ ಗೌಡಗಾಂವ, ತಬಲಾ ವಾದಕ ಬಸವರಾಜ ಆಳಂದ ಉಪಸ್ಥಿತರಿದ್ದರು. ಪ್ರಭು ಶಾಸ್ತ್ರಿ ಹೋಮ ಪೂಜೆ ಸಲ್ಲಿಸಿದರು.

ಗ್ರಾಮದಲ್ಲಿ ಶ್ರೀ ಉದಯಲಿಂಗೇಶ್ವರ ದೇವರ ಅಡ್ಡ ಫಲ್ಲಕ್ಕಿ ಮಹೋತ್ಸವವು ವಿವಿಧ ವಾದ್ಯ ಮೇಳ, ಭಜನಾ ಮಂಡಳಿ, ಪುರವಂತರ ಸೇವೆಯೊಂದಿಗೆ ಜರುಗಿತು. ಗ್ರಾಮದ ಮಾಜಿ ಸೈನಿಕರನ್ನು ಸತ್ಕರಿಸಲಾಯಿತು.

ಶಿರಕನಹಳ್ಳಿ ಗ್ರಾಮದ ಲೋಣಿ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಮಾತೋಶ್ರೀ ಶಶಿಕಲಾ ಲೋಣಿ ಅವರ ಪರಿವಾರದಿಂದ ನಾಗಠಾಣ ಪೂಜ್ಯರಿಗೆ ಸ್ಮರಣೀಯ ಭಕ್ತಿಯ ಕಾಣಿಕೆ ರೂಪದಲ್ಲಿ ಬೆಳ್ಳಿಯ ಕಿರೀಟ ಸಮರ್ಪಿಸಲಾಯಿತು. ಶ್ರೀಶೈಲ ಹುಂಡೇಕಾರ ಭಕ್ತಾದಿಗಳಿಗೆ ಮಹಾಪ್ರಸಾದದ ಸೇವೆ ಸಲ್ಲಿಸಿದರು. ನಾಗಠಾಣ, ಗಂಗನಳ್ಳಿ, ಶಿರಕನಹಳ್ಳಿ ಸೇರಿದಂತೆ ಅನೇಕ ಗ್ರಾಮದ ಭಕ್ತರು, ತಾಯಂದಿರು ಪಾಲ್ಗೊಂಡಿದ್ದರು.

# ಕನಕ ಪಬ್ಲಿಕ್ ಶಾಲೆಯಲ್ಲಿ "ಮಾತೃ ಸಂಗಮ" ಕಾರ್ಯಕ್ರಮ



**ವಿಜಯಪುರ:** ತಾನು ಕಷ್ಟಪಟ್ಟು ತನ್ನ ಮಕ್ಕಳು ಸುಖವಾಗಿ ಬಾಳಲಿ ಎಂದು ಮಕ್ಕಳಿಗೋಸ್ಕರ ಜೀವನವನ್ನು ಮುಡುಪಾಗಿಟ್ಟ ಈ ಜಗತ್ತಿನ ಶ್ರೇಷ್ಠ ತ್ಯಾಗ ಜೀವಿ ಅವ್ವ, ಅವ್ವನ ವ್ಯಕ್ತಿತ್ವವನ್ನು ವರ್ಣಿಸಲು ಪದಗಳೇ ಸಾಲದು, ನಮ್ಮ ಕಣ್ಣು ಮುಂದೆ ಕಾಣುವ ನಿಜವಾದ ದೇವತೆ ತಾಯಿ ಎಂದು ವಾಗ್ಮಿ ಸಾಹಿತಿ, ಅಶೋಕ ಹಂಚಲಿ ಹೇಳಿದರು.

ಇಂದು ನಗರದ ಕರ್ನಾಟಕ ಕನಕದಾಸ ಶಿಕ್ಷಣ ಸಂಸ್ಥೆಯ ಕನಕ ಪೂರ್ವ ಪ್ರಾಥಮಿಕ ಪಬ್ಲಿಕ್ ಶಾಲೆ ಹಾಗೂ ಕನಕ ನವೋದಯ ಕೋಚಿಂಗ್ ಸೆಂಟರ್ ನಲ್ಲಿ ಹಮ್ಮಿಕೊಂಡ ಮಾತೃ ಸಂಗಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾಹಿತಿ ಪ್ರೊ. ಎ.ಎಚ್. ಕೊಳಮಲಿ ಮಾತನಾಡಿ, ಹೆತ್ತು ಹೊತ್ತು ತುತ್ತು ಮಾಡಿ ತಿನಿಸಿ ನಮ್ಮನ್ನು ಬೆಳೆಸಿದ ತಾಯಿಯ ಋಣವನ್ನು ಯಾವ ಜನುಮದಲ್ಲಿ ತೀರಿಸಲು ಸಾಧ್ಯವಿಲ್ಲ.

ಮಕ್ಕಳ ಏಳಿಗೆಗಾಗಿ ಶ್ರಮ ಪಡುವ ಜಗತ್ತಿನ ಏಕೈಕ ಕರುಣಾಮಯಿ ತಾಯಿ. ತಾಯಿಗೆ ತಾಯಿನೇ ಸಾಟಿ. ಪ್ರತಿನಿತ್ಯ ಪ್ರತಿಕ್ಷಣ ತಾಯಿಯನ್ನು ಪ್ರೀತಿಸಬೇಕು. ಗೌರವಿಸಬೇಕು. ತಾಯಿಯ ಸೇವೆ ಮಾಡಿದರೆ ಜೀವನ ಪಾವನವಾಗುತ್ತದೆ ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷ ಜಯಪ್ರಭು ಕೊಳಮಲಿ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಮಾನವೀಯತೆ ಮತ್ತು ಸಂಸ್ಕಾರ ನಶಿಸಿ ಹೋಗುತ್ತದೆ. ಗುಣಮಟ್ಟದ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯವನ್ನು ತುಂಬುವ ಕೆಲಸವನ್ನು ನಿರಂತರವಾಗಿ ನಮ್ಮ ಶಾಲೆ ಮಾಡುತ್ತಿದೆ ಎಂದು ಹೇಳಿದರು.

ನಿರ್ದೇಶಕ ರಾಮಸ್ವಾಮಿ ಕೊಳಮಲಿ ಮಾತನಾಡಿ, ತಾಯಿಯೇ ಮೊದಲು ಗುರು ಎಂದರು. ದಿವ್ಯ ಸಾನಿಧ್ಯವನ್ನು ವಹಿಸಿದ್ದ ಕೃಪಾಮಯಿ ಶಾರದಾ ಆಶ್ರಮದ ಅಧ್ಯಕ್ಷೆ ಕೈವಲ್ಯಮಯ ಮಾತಾಜಿಯವರು ಆಶೀರ್ವಚನ ನೀಡಿ, ತಾಯಿಗೆ ಈ ಜಗತ್ತಿನಲ್ಲಿ ಅಗ್ರಮಾನ್ಯ ಸ್ಥಾನವಿದೆ ತಾಯಿಗಿಂತ ಬಂಧುವಿಲ್ಲ ತಾಯಿಯ ಪ್ರೀತಿಗೆ ಸರಿ ಸಮನಾದದ್ದು ಯಾವುದು ಇಲ್ಲ ವಂಶದ ಕುಡಿದಾಗ ಶ್ರಮಿಸುವ ಶ್ರೇಷ್ಠ ಜೀವಿ ತಾಯಿ ಎಂದು ಹೇಳಿದರು.

ಶಿಕ್ಷಣ ಸಂಯೋಜಕ ಎ.ಕೆ. ದಳವಾಯಿ ಮಾತನಾಡಿ,

ನಿಸರ್ಗದ ಶ್ರೇಷ್ಟ ಮಾತೆ ತಾಯಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಕ್ಕಳಿಂದ ತಾಯಂದಿರ ಪಾದ ಪೂಜೆಯನ್ನು ಮಾಡಲಾಯಿತು

ಸಿಆರ್‌ಪಿ ಸವಿತಾ ಬಿ ಎನ್. ಅಲಿಯಾಬಾದ ಗ್ರಾಮ ಪಂಚಾಯತಿ ಸದಸ್ಯ ಸುಭಾಷ್ ಪವಾರ ,ಸಿದ್ದಪ್ಪ ಪೂಜಾರಿ, ಗಣಪತಿ ಒಡೆಯರ್,

ಅಮಸಿದ್ದ ಬಂಡಿವಡ್ಡರ, ಹಾಗೂ ಸಂಸ್ಥೆ ಆಡಳಿತ ಮಂಡಳಿ,

ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು

ಗಾಯಕ ಸೋಮಶೇಖರ ಕೊರ್ಲೆ ಪ್ರಾರ್ಥಿಸಿದರು, ಶಿಕ್ಷಕ ಗಂಗರಾಮ ಲಚ್ಚನ ಸ್ವಾಗತಿಸಿ ನಿರೂಪಿಸಿದರು.

# ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ನಿಲುವು ಸ್ಪಷ್ಟಪಡಿಸಲಿ: ಕುಮಟಗಿ



**ಬಾಗಲಕೋಟೆ :** ಕೃಷ್ಣ ಮೇಲ್ದಂಡೆ ಯೋಜನೆ (ಯುಕೆಪಿ) ಪೂರ್ಣಗೊಳಿಸುವ ಕುರಿತು ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕೆಂದು ರೈತರ ಹಕ್ಕುಗಳ ಹೋರಾಟ ಸಮಿತಿ ಮುಖಂಡ ರವಿ ಕುಮಟಗಿ ಒತ್ತಾಯಿಸಿದ್ದಾರೆ. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಮಾತನಾಡಿದ ಅವರು "ಸರ್ಕಾರಗಳ ನಿರ್ಲಕ್ಷ್ಯದ ಪರಿಣಾಮವಾಗಿ ಯೋಜನೆಯ ವೆಚ್ಚ ದಿನೇದಿನೇ ಹೆಚ್ಚುತ್ತಿದೆ. ಈಗಾಗಲೇ ಸಾವಿರಾರು ಕೋಟಿ ವೆಚ್ಚವಾಗಿರುವ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ನೀರಾವರಿ ಸಚಿವ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಎರಡು ಲಕ್ಷ ಕೋಟಿ ರೂಪಾಯಿ ಎಲ್ಲಿಂದ ಬರುತ್ತದೆ' ಎಂದು ಹೇಳಿರುವುದು ಜವಾಬ್ದಾರಿಯುತ ಮಾತಲ್ಲ," ಎಂದು ಆಕ್ರೋಶ ವ್ಯಕ್ತಪಡಿಸಿದರು. "ಸರ್ಕಾರ ಮುಂದಿನ ಆರು ವರ್ಷಗಳ ಕಾಲ ಪ್ರತೀ ವರ್ಷ ಕನಿಷ್ಠ ನಲವತ್ತು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಲ್ಲಿ ಮಾತ್ರ ಯೋಜನೆ ಪೂರ್ಣಗೊಳ್ಳುತ್ತದೆ. ಕೃಷ್ಣಾ ನದಿ ನೀರನ್ನು ಬಳಸಿಕೊಂಡು ಬರೀ ರಾಜಕೀಯ ಮಾಡದೇ ರೈತರ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಕರ್ತವ್ಯ," ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರೈತರ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಬಸಪ್ಪ ಸ್ವಾಗಿ, ಮುಖಂಡರಾದ ನಿಂಗಪ್ಪ ಗೋಡಿ, ಧರಿಯಪ್ಪ ಸ್ವಾಗಿ, ನಿಂಗಪ್ಪ ಸ್ವಾಗಿ, ಡಿ.ಬಿ. ಪೂಜಾರ ಹಾಗೂ ಹಲವು ರೈತ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಲಿಂಗಸುಗೂರುದಿಂದಬಾಗಲಕೋಟ ವಾಯ ಆನಾ ಹೊಸೂರು ಮತ್ತು ಚಿತ್ತಾಪುರರಿಂದ ಬೆಂಗಳೂರು ನೂತನವಾಗಿ ಬಸ್‌ಗಳ ಸಂಚಾರಕ್ಕೆ ಚಾಲನೆ



**ಲಿಂಗಸುಗೂರು :** ತಾಲೂಕಿನ ಆನೇಹೊಸೂರು ಗ್ರಾಮದಲ್ಲಿ ಇಂದು ಗ್ರಾಮದ ಹಿರಿಯರು ಸಂಘಸಂಸ್ಥೆಗಳ ಮುಖಂಡರು ಗ್ರಾಮಸ್ಥರು ತಮ್ಮ ಬಹುದಿನಗಳ ಬೇಡಿಕೆ ಈಡೇರಿಕೆಗೆ ಸ್ಪಂದಿಸಿದ್ದು ಸಾರ್ವಜನಿಕರು ಸಂತೋಷ ದಿಂದತಮ್ಮ ಮನದ ಮಾತುಗಳ ಹೇಳುತ್ತ ಆರೋಗ್ಯ ದ ಹಿತರಕ್ಷಣೆ ಗಾಗಿ ಹೆಚ್ಚಿನ ಚಿಕಿತ್ಸೆಗಾಗಿ ಮತ್ತು ಅನೇಕ ಅನೂಕೂಲಕರ ಮಹತ್ವದ ಕಾರ್ಯಗಳಿಗಾಗಿ ಅನೂಕೂಲಕರ ವಾಗಿರುವದಾಗಿ ಗ್ರಾಮಸ್ಥರುಸಂತೋಷ ಪಟ್ಟರು.

ಲಿಂಗುಸೂಗೂರ ದಿಂದ ಬಾಗಲಕೋಟ, ವಾಯ ಆನೆಹೊಸೂರ್ ಹಾಗೂ ಚಿತ್ತಾಪೂರ ದಿಂದ ಬೆಂಗಳೂರು ನಗರಗಳ ಸಂಚಾರಕ್ಕೆ ನೂತನವಾಗಿ ಬಸ್ ಗಳು ಗೆ ಚಾಲನೆ ನೀಡಿದರು.ನೂತನ ಮಾರ್ಗವಾಗಿ ಸಂಚರಿಸುವ ಬಸ್ಸು ಗಳಿಗೆ ಚಾಲನೆಗೆ, ಇಂದು ಗ್ರಾಮದ ಹಿರಿಯರು, ಗ್ಯಾರಂಟಿ ಯೋಜನೆಯ ಅಧ್ಯಕ್ಷರು, ಶ್ರೀ ವೆಂಕಟೇಶ್ ಗುತ್ತೇದಾರ, ಗ್ಯಾರಂಟಿ ಯೋಜನೆ ಸದಸ್ಯರಾದ, ಶ್ರೀ ಗದ್ದೆನ್ ಗೌಡ, ನೆಂದಿಹಾಳ್, ಶ್ರೀ ಡಿ ಗುರಿಕಾರ, ಶ್ರೀ ಬಸವಂತ ಗೌಡ್ರು ತೊವಿ ಕೆಡಿಪಿ ಸದಸ್ಯರು, ಶ್ರೀ ಶರಣಪ್ಪ ಕಟಗಿ, ಮುಖಂಡರಾದ ಶ್ರೀ ಗ್ಯಾನಪ್ಪ ಕಟ್ಟಿಮನಿ,ಶ್ರೀ ಇಸ್ಮಾಯಿಲ್ ಹುಬ್ಬಳ್ಳಿ, ಶ್ರೀ ಬುಡ್ಡಸಾಬ್ ಹುಡೇದ್, ಶ್ರೀ ಎಮ್ ಡಿ ಉಸ್ಮಾನ್ ಆರ್ ಬೆಂಡೋಣಿ, ಶ್ರೀಮತಿ ಲಕ್ಷ್ಮಿ ದೇವಿ ಶ್ರೀ,ರಾಜಾಸಬ್ ಕರಡಿ,ಶ್ರೀ ದವಲಸಬ್ ಪಠಾಣ್, ಶ್ರೀ ಶಾಜಾನ್ ಬೆಂಡೋಣಿ, ಸಂಗಮೇಶ್ ನಾಯಕ್, ಶಿವಪ್ಪ ಕಟ್ಟಿಮನಿ,ನಾಗರಾಜ್ ಮಡಿವಾಳ್, ಭೀಮನಗೌಡ ಸುಂಕದ, ಇನಿತರರು ಹಾಗು ಗ್ರಾಮದವರ ಸಮ್ಮುಖದಲ್ಲಿ ಬಸ್ಸುಗಳ ಸಂಚಾರ ಕುಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಸ್ಥಳೀಯ ನೂರಾರು ಮುಖಂಡರು ಉಪಸ್ಥಿತರಿದ್ದರು.

**ವರದಿ.ಚಂದ್ರೇಗೌಡ ಹೊನ್ನಳ್ಳಿ.**

# ನಾಗಪುರಕ್ಕೆ ವಿಶೇಷ ರೈಲು ಓಡಿಸಲು ಮನವಿ

**ಕಲಬುರಗಿ :** ಅಕ್ಟೋಬರ್ 2 ರಂದು ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿಯಲ್ಲಿ ನಡೆಯಲಿರುವ ಧಮ್ಮಚಕ್ರ ಪ್ರವರ್ತನಾ ದಿನ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲೆಯೂ ಒಳಗೊಂಡಂತೆ ನೆರೆಯ ಮಹಾರಾಷ್ಟ್ರ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಬೌದ್ಧ ಅನುಯಾಯಿಗಳು ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಸೊಲ್ಲಾಪುರ-ನಾಗಪುರ ಮಧ್ಯೆ ಕಲಬುರಗಿ ಮೂಲಕವಾಗಿ ವಿಶೇಷ ರೈಲು ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿ ಅಖಿಲ ಕರ್ನಾಟಕ ದಲಿತ ಸೇನೆ ರಾಜ್ಯಾಧ್ಯಕ್ಷ ದತ್ತಾತ್ರೇಯ ಕುಡಕಿಯವರ ನಿಯೋಗದೊಂದಿಗೆ ಸಂಸದ ರಾಧಾಕೃಷ್ಣ ದೊಡ್ಡಮನಿಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಧಮ್ಮಚಕ್ರ ಪ್ರವರ್ತನಾ ದಿನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನುಯಾಯಿಗಳು ಪಾಲ್ಗೊಳ್ಳುವ ನಿರೀಕ್ಷೆ ಇರುವುದರಿಂದ ಸಾರಿಗೆ ವ್ಯತ್ಯಯ ಉಂಟಾಗಿ ಧಮ್ಮ ಅನುಯಾಯಿಗಳಿಗೆ ತೊಂದರೆಯಾಗುವ ಸಾಧ್ಯತೆಗಳಿದ್ದು, ಈ ಹಿನ್ನೆಲೆಯಲ್ಲಿ ನಾಗಪುರ ದೀಕ್ಷಾ ಭೂಮಿಗೆ ಸುರಕ್ಷಿತವಾಗಿ ಹೋಗಿ ಬರಲು ಅನುಕೂಲವಾಗುವಂತೆ ಕಲಬುರಗಿ ಮಾರ್ಗವಾಗಿ ಸೊಲ್ಲಾಪುರ-ನಾಗಪುರ ಮಧ್ಯೆ ವಿಶೇಷ ದಿನಕ್ಕೊಂದೇ ವಿಶೇಷ ರೈಲು ಸಂಚಾರ ವ್ಯವಸ್ಥೆ ಮಾಡಲು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಬೇಕೆಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.



ಸೇನೆ ರಾಜ್ಯ ಗೌರವಾಧ್ಯಕ್ಷ ಆನಂದರಾಯ ಎಲ್. ಗಾಯಕವಾಡ, ಸಾಹಿತಿ ಡಾ.ಕೆ.ಎಸ್.ಬಂಧು ಸಿದ್ದೇಶ್ವರಕರ, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಸಂಜೀವಕುಮಾರ ಕಾಂಬಳೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಓಣಂ ಹಬ್ಬ-ನಾಡು, ಭಾಷೆ, ಸಂಸ್ಕೃತಿಗಳ ಸೇತುವೆ





**ಬಾಗಲಕೋಟೆ :** ಹಬ್ಬಗಳು ನಾಡಿನ ಸಂಸ್ಕೃತಿಯ ಅಸ್ಮಿತೆಯ ಪ್ರತಿಕವಾಗಿದ್ದು, ಜನರ ನಡುವೆ ಸೌಹಾರ್ದದ ಭಾವನೆ ಬಲಪಡಿಸುತ್ತವೆ.

ಕೇರಳದ ಸಾಂಪ್ರದಾಯಿಕ ಸುಗ್ಗಿ ಹಬ್ಬವಾದ ಓಣಂವನ್ನು ಬಾಗಲಕೋಟೆಯ ಸಜ್ಜಲಶ್ರೀ ನರ್ಸಿಂಗ್ ಕಾಲೇಜು ಆವರಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಸಿ. ಚರಂತಿಮಠ ಮಾತನಾಡಿ, "ಭಾಷೆ ಬೇರೆ ಇದ್ದರೂ ಹಬ್ಬಗಳು ಜನರನ್ನು ಒಗ್ಗೂಡಿಸುತ್ತವೆ.

ಹಬ್ಬಗಳು ನಾಡು, ಭಾಷೆ, ಸಂಸ್ಕೃತಿಗಳ ನಡುವೆ ಸೇತುವೆಗಳಾಗಿ ಕೆಲಸ ಮಾಡುತ್ತವೆ. ಕರ್ನಾಟಕದಲ್ಲಿ ಕೇರಳದ ವಿದ್ಯಾರ್ಥಿಗಳು ಓಣಂ ಹಬ್ಬವನ್ನು ಆಚರಿಸುವ ಮೂಲಕ ಪರಸ್ಪರ ಸಂಸ್ಕೃತಿಯ ಅರಿವು ಹೆಚ್ಚುತ್ತಿದೆ" ಎಂದು ಹೇಳಿದರು. ಕಾರ್ಯಕ್ರಮದ ಸಂದರ್ಭದಲ್ಲಿ ಕೇರಳದ ಚಂಡಮದ್ದಳೆ ತಂಡ, ಬಾಣಸಿಗರ ಪ್ರದರ್ಶನ ಹಾಗೂ ಸ್ತಬ್ದಚಿತ್ರಗಳು ಗಮನ ಸೆಳೆದವು.

ಸಜ್ಜಲಶ್ರೀ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯರು ಸಾಂಪ್ರದಾಯಿಕ ಉಡುಗೆಯಲ್ಲಿ ಓಣಂ ನೃತ್ಯ ಪ್ರದರ್ಶಿಸಿದರು. ಮಹಾಬಲಿ ವೇಷಧಾರಿಗಳು, ಗಿನ್ನಿಸ್ ದಾಖಲೆ ಪಡೆದ ಕಾವಾಡಿ ದ್ರುವಂ ಕಲಾವಿದರ ತಂಡ ಮತ್ತು 500ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಂದ ಅದ್ದೂರಿ ಮೆರವಣಿಗೆ ಜರುಗಿತು. ಕಾಲೇಜು ಆವರಣದಲ್ಲಿ ಓಣಂ ಪಾರಂಪರಿಕ ಖಾದ್ಯವಾದ 24 ವಿಧಗಳ ಸವಿ ಊಟ ಸವಿದರು. ವಿವಿಧ ಆರೋಗ್ಯ ವಿಜ್ಞಾನ ಸಂಸ್ಥೆಗಳ ಬೋಧಕ-ಬೋಧಕೇತರ ಸಿಬ್ಬಂದಿ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಸಂಭ್ರಮಿಸಿದರು.

# ನೀರು ಶುದ್ಧೀಕರಣ ಘಟಕಕ್ಕೆ ಮೇಯರ್, ಉಪಮೇಯರ್ ಭೇಟಿ, ಪರಿಶೀಲನೆ



**ಕಲಬುರಗಿ :** ನಗರ ಹೊರವಲಯದ ನಂದಿಕೂರ್ ಗ್ರಾಮದಲ್ಲಿರುವ ಒಳಚರಂಡಿ ನೀರು ಶುದ್ಧೀಕರಣ ಘಟಕಕ್ಕೆ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಎಸ್.ಲಾಖೆ ಮತ್ತು ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೇಯರ್ ವರ್ಷಾ ಜಾನೆ ಅವರು ಈ ಸಂದರ್ಭದಲ್ಲಿ ಮಾತನಾಡಿ, ಒಳಚರಂಡಿ ನೀರನ್ನು ಪ್ರಾಥಮಿಕವಾಗಿ ಈ ಘಟಕದಲ್ಲಿ ಶುದ್ಧೀಕರಣಗೊಳಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡಲಾಗುತ್ತದೆ. ಜೊತೆಗೆ ನಗರದ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಲಾಗುವುದು ಹೇಳಿದರು. ಮುಂದೆ ಯಾವ ರೀತಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಹಾಗು ಪಾಲಿಕೆಯ ಆಯುಕ್ತರ ಜೊತೆ ಚರ್ಚಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State